# ದಿನಾಂಕ: 03-02-2022 ರಂದು ನಡೆದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 35ನೇ ಸಭೆಯ ನಡವಳಿಗಳು

**: ಅಧ್ಯಕ್ಷತೆ :**

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್**

**ಸನ್ಮಾನ್ಯ ಕಾರ್ಮಿಕ ಸಚಿವರು**

**ಹಾಗೂ**

**ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.**

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪ್ರತಿನಿಧಿ ಸದಸ್ಯರುಗಳು:**

1. ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದ್ ಮಜ್ದೂರ್ ಸಭಾ, ಬೆಂಗಳೂರು
2. ಶ್ರೀ ಎಸ್. ಎಸ್ ಪ್ರಕಾಸಂ, ಅಧ್ಯಕ್ಷರು, ಐಎನ್‌ಟಿಯುಸಿ, ಬೆಂಗಳೂರು
3. ಶ್ರೀಮತಿ ಶಿವಾನಿ ಶಾಂತರಾಮ ಭಟ್ಕಳ, ರಾಜ್ಯ ಪ್ರತಿನಿಧಿ ಸದಸ್ಯರು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು
4. ಶ್ರೀ ವಿಶ್ವನಾಥ್ ಶೆಟ್ಟಿ ಅಧ್ಯಕ್ಷರು. ಭಾರತೀಯ ಮಜ್ದೂರ್ ಸಂಘ, ಬೆಂಗಳೂರು
5. ಅಧ್ಯಕ್ಷರು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರು

**ಹಾಜರಿದ್ದ ಅಧಿಕಾರಿ ಅಥವಾ ಅವರ ನಾಮ ನಿರ್ದೇಶಿತ ಸದಸ್ಯರು:**

1. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಲ್ಯಾಣ ಸುರಕ್ಷಾ ಭವನ, ಬೆಂಗಳೂರು
2. ಕಲ್ಯಾಣ ಆಯುಕ್ತರು, ಭಾರತ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಕಾರ್ಮಿಕ ಕಲ್ಯಾಣ ಸಂಸ್ಥೆ, ಬೆಂಗಳೂರು-ಇವರ ಪರವಾಗಿ ಶ್ರೀ ರಾಮದುರ್ಗಾ ಪ್ರಸಾದ್,
3. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು-ಇವರ ಪರವಾಗಿ ಜಂಟಿ ಕಾರ್ಯದರ್ಶಿಗಳು.
4. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು-ಇವರ ತಾಂತ್ರಿಕ ಸಹಾಯಕರು.

**ಗೈರು ಹಾಜರಿದ್ದವರು: -**

1. ಶ್ರೀಮತಿ ಡಾ.ಜಿ.ಕಲ್ಪನಾ, ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ವಿಕಾಸಸೌಧ, ಬೆಂಗಳೂರು
3. ಅಧ್ಯಕ್ಷರು, CREDAI, ಬೆಂಗಳೂರು.
4. ಅಧ್ಯಕ್ಷರು, Construction Federation of India, New Delhi.

ಮಂಡಳಿಯ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಸನ್ಮಾನ್ಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಮತ್ತು ಮಂಡಳಿಯ ಸದಸ್ಯರನ್ನು ಸ್ವಾಗತಿಸಿದರು. ಮಂಡಳಿಯು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ಅಂದರೆ ಕಳೆದ 15 ವರ್ಷಗಳಿಂದಲೂ ಕಟ್ಟಡ ಕಾರ್ಮಿಕರಿಗಾಗಿ ಮತ್ತು ಅವರ ಅವಲಂಬಿತರಿಗಾಗಿ 19 ವಿವಿಧ ಯೋಜನೆಗಳನ್ನು ಜಾರಿಗೊಳಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಎಂದು ಸಭೆಗೆ ತಿಳಿಸಿ, ಮಂಡಳಿಯು ಸುಂಕ ಸಂಗ್ರಹಣೆಯಿಂದ ಪಡೆದ ಮೊತ್ತವನ್ನು ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿಗಳಲ್ಲಿ ಮತ್ತು ಉಳಿತಾಯ ಖಾತೆಗಳಲ್ಲಿ ಹೂಡಿಕೆ ಮಾಡಿರುವ ಬಾಬ್ತಿನ ಮೇಲೆ ಪಡೆದ ಬಡ್ಡಿಯಿಂದ ಮತ್ತು ಮಂಡಳಿಯ ಕಲ್ಯಾಣ ಸುರಕ್ಷಾ ಭವನದ 3ನೇ ಮಹಡಿಯಲ್ಲಿ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿ ಕಛೇರಿಗೆ ಹಾಗೂ ಕೌಶಲ್ಯಾಭಿವೃದ್ಧಿ ಪ್ರಾಧಿಕಾರದ ಕಛೇರಿಗಳಿಗೆ ನೀಡಿರುವ ಸ್ಥಳಾವಕಾಶದ ಬಾಡಿಗೆಯಿಂದ ಆದಾಯವನ್ನು ಪಡೆಯುತ್ತಿದ್ದು, ಸರ್ಕಾರದಿಂದ ಯಾವುದೇ ಅನುದಾನ ಪಡೆಯುತ್ತಿಲ್ಲವೆಂದು ಸಭೆಗೆ ತಿಳಿಸಿದರು. ಪ್ರಸ್ತುತ ವರ್ಷದಲ್ಲಿ ಕಟ್ಟಡ ಕಾರ್ಮಿಕರಿಗೆ ನೀಡುತ್ತಿರುವ ಸೌಲಭ್ಯದೊಂದಿಗೆ ಹೊಸ ಹೊಸ ಯೋಜನೆಗಳನ್ನು ನೀಡಲು ಕ್ರಮ ಕೈಗೊಂಡಿದ್ದು, ಅದರಲ್ಲಿ ಪ್ರಮುಖವಾಗಿ ಕಟ್ಟಡ ಕಾರ್ಮಿಕರ ಅವಲಂಬಿತರು ಸ್ವ-ಉದ್ಯೋಗವನ್ನು ಮಾಡುವ ದೃಷ್ಟಿಯಿಂದ ಮುಂಬರುವ ಬಜೆಟ್‌ನಲ್ಲಿ ಹೊಲಿಗೆಯಂತ್ರ ನೀಡುವ ಯೋಜನೆ ಘೋಷಿಸಿರುವುದಾಗಿ ತಿಳಿಸಿದರು ಮತ್ತು ಮಂಡಳಿಯ 35ನೇ ಸಭೆಯನ್ನು ನಡೆಸಿಕೊಡಬೇಕೆಂದು ಸನ್ಮಾನ್ಯ ಮಂಡಳಿಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರನ್ನು ಕೋರಿದರು.

ಸನ್ಮಾನ್ಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಮಾತನಾಡುತ್ತಾ ಹೊಸ ವರ್ಷದಲ್ಲಿ ನಡೆಯುತ್ತಿರುವ ಮಂಡಳಿಯ ಪ್ರಥಮ ಸಭೆ ಇದಾಗಿದ್ದು, ಪ್ರಸ್ತುತ ಕೋವಿಡ್ ಮಹಾಮಾರಿಯ ಸಂದರ್ಭದಲ್ಲಿಯೂ ಕಟ್ಟಡ ಕಾರ್ಮಿಕರಿಗಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡಿರುವ ಏಕೈಕ ರಾಜ್ಯ ನಮ್ಮ ಕರ್ನಾಟಕ ರಾಜ್ಯವಾಗಿರುವುದು ಹೆಮ್ಮೆಯ ವಿಷಯವನ್ನು ಸಭೆಗೆ ತಿಳಿಸಿದರು.

ಮಂಡಳಿಯ ಕಾರ್ಯದರ್ಶಿಯವರು ಕಾರ್ಯಸೂಚಿಯನ್ವಯ ಪ್ರಪ್ರಥಮವಾಗಿ ದಿನಾಂಕ: 22-9-2021 ರಂದು ನಡೆದ ಮಂಡಳಿ ಸಭೆಯ ನಡವಳಿಗಳನ್ನು ಓದಿದರು ಮತ್ತು ಅದನ್ನು ಸ್ಥಿರೀಕರಿಸಲು ಸಭೆಯನ್ನು ಕೋರಿದರು. ಹಾಜರಿದ್ದ ಮಂಡಳಿಯ ಸದಸ್ಯರೆಲ್ಲರು ಸಹಮತದಿಂದ ಮಂಡಳಿಯ 34ನೇ ಸಭೆಯ ನಡುವಳಿಗಳಿಗೆ ಒಪ್ಪಿಗೆ ಸೂಚಿಸಲು 34ನೇ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲಾಯಿತು.

## ವಿಷಯ ಸಂಖ್ಯೆ-02

**ಮಂಡಳಿಯ 2022-2023 ನೇ ಸಾಲಿನ ಬಜೆಟ್‌ಗೆ ಅನುಮೋದನೆ ಪಡೆಯುವ ಕುರಿತು.**

ಮಂಡಳಿಯ 2022-23ನೇ ಸಾಲಿನ ಕರಡು ಆಯವ್ಯಯವನ್ನು ತಯಾರಿಸಿದ್ದು (ವಿವರಗಳನ್ನು ಪ್ರತ್ಯೇಕವಾಗಿ ನೀಡಿದೆ). ಅದರಲ್ಲಿ 2022-23ನೇ ಸಾಲಿನಲ್ಲಿ ರೂ.2646.30 ಕೋಟಿಗಳಷ್ಟು ಆದಾಯವನ್ನು ಮತ್ತು ರೂ.2645.21 ಕೋಟಿಗಳಷ್ಟು ಖರ್ಚು ವೆಚ್ಚಗಳನ್ನು ನಿರೀಕ್ಷಿಸಲಾಗಿದೆ ಎಂದು ಸಭೆಗೆ ಕಾರ್ಯದರ್ಶಿಯವರು ತಿಳಿಸಿದರು. ಈ ಕುರಿತು ಮಂಡಳಿಯ ಕಾರ್ಯದರ್ಶಿಯವರು ವಿಷಯವನ್ನು ಮಂಡಿಸಿ ಬಜೆಟ್ ವಿವರಗಳನ್ನು ಸಭೆಯಲ್ಲಿನ ಸದಸ್ಯರೆಲ್ಲರಿಗೂ ನೀಡಿ, ಈ ಕುರಿತು ಚರ್ಚಿಸಿ ಅನುಮೋದನೆ ನೀಡುವಂತೆ ಕೋರಿದರು.

ಬಜೆಟ್ ವಿಷಯವಾಗಿ ಪ್ರಸಕ್ತ ಸಾಲಿನಲ್ಲಿ ಕಟ್ಟಡ ಕಾರ್ಮಿಕರಿಗೆ ಒದಗಿಸುತ್ತಿರುವ 19 ವಿವಿಧ ಸೌಲಭ್ಯಗಳಿಗಾಗಿ ಖರ್ಚಾದ ಮೊತ್ತವನ್ನು ಮತ್ತು ಮುಂಬರುವ 2022-23 ನೇ ಸಾಲಿಗೆ ಮೀಸಲಿರಿಸಿದ ಬಜೆಟ್ ವಿವರಗಳನ್ನು ಸಭೆಯ ಸದಸ್ಯರ ಗಮನಕ್ಕೆ ತರಲಾಯಿತು.

ಮಾನ್ಯ ಕಾರ್ಮಿಕ ಸಚಿವರು ಮಾತನಾಡುತ್ತಾ, ಇದುವರೆಗೂ 28,94,389 ಕಟ್ಟಡ ಕಾರ್ಮಿಕರು ನೋಂದಣಿಯಾಗಿದ್ದು, ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ 19 ವಿವಿಧ ಯೋಜನೆಗಳಿದ್ದು, ಇದರನ್ವಯ ಯೋಜನಾವಾರು ಬಜೆಟ್ ಮೀಸಲಿರಿಸಲಾಗಿದೆ, ಕಟ್ಟಡ ಕಾರ್ಮಿಕರಿಗೆ ಶ್ರಮಸಾಮರ್ಥ್ಯ ಟೂಲ್ ಕಿಟ್ ವಿತರಣಾ ಯೋಜನೆಗಾಗಿ ರೂ.100 ಕೋಟಿ, ಕಟ್ಟಡ ಕಾರ್ಮಿಕರ ಮಕ್ಕಳ ಸ್ಪರ್ಧಾತ್ಮಕ ಪರೀಕ್ಷೆಗಳ ಯೋಜನೆಗಾಗಿ ರೂ.70 ಕೋಟಿ, ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆಗಾಗಿ ರೂ.50 ಕೋಟಿ ಆಯವ್ಯಯವನ್ನು ಮೀಸಲಿರಿಸಲಾಗಿದೆ ಎಂದು ಸಭೆಗೆ ವಿವರಿಸಿದರು. ಅಲ್ಲದೇ ವಿಶೇಷವಾಗಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಅವಲಂಬಿತರು ಸ್ವ-ಉದ್ಯೋಗವನ್ನು ಮಾಡುವ ದೃಷ್ಟಿಯಿಂದ ಮುಂಬರುವ ಬಜೆಟ್‌ನಲ್ಲಿ ಹೊಲಿಗೆಯಂತ್ರ ನೀಡುವ ಯೋಜನೆ ಘೋಷಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ವೈದ್ಯಕೀಯ ಸೌಲಭ್ಯಕ್ಕಾಗಿ ಅದರಲ್ಲಿಯೂ ವಿಶೇಷವಾಗಿ ಕೋವಿಡ್-19 ರ ಸಂಕಷ್ಟದ ಸಂದರ್ಭದಲ್ಲಿ ಮಂಡಳಿಯು ಪ್ರಸಕ್ತ ಸಾಲಿನಲ್ಲಿ ರೂ.110 ಕೋಟಿಗಳ ಮೊತ್ತವನ್ನು ಕಟ್ಟಡ ಕಾರ್ಮಿಕರಿಗೆ ಹಾಗೂ ಅವರ ಅವಲಂಬಿತರಿಗಾಗಿ ವೆಚ್ಚ ಭರಿಸಿದ್ದು, ಮುಂದಿನ ವರ್ಷದಲ್ಲಿ ವೈದ್ಯಕೀಯ ಸೌಲಭ್ಯಕ್ಕಾಗಿ ರೂ.165 ಕೋಟಿಯನ್ನು ಮೀಸಲಿಡಲಾಗಿದೆ. ಮುಂದುವರೆದು ಶೈಕ್ಷಣಿಕ ಧನಸಹಾಯ ಯೋಜನೆಗಾಗಿ ರೂ.536 ಕೋಟಿ, ವೈದ್ಯಕೀಯ ಸೌಲಭ್ಯದ ಯೋಜನೆಗಾಗಿ ರೂ.400 ಕೋಟಿ ಆಯವ್ಯಯವನ್ನು ಮೀಸಲಿರಿಸಿದ್ದು, ಇದರಲ್ಲಿ ಮೊಬೈಲ್ ಕ್ಲಿನಿಕ್‌ಗಳ ವೆಚ್ಚವೂ ಸೇರಿರುವುದೆಂದು ತಿಳಿಸುತ್ತಾ ಮಂಡಳಿ ವತಿಯಿಂದ ಕಟ್ಟಡ ಕಾರ್ಮಿಕರಿಗೆ ನೀಡಲಾಗುತ್ತಿರುವ ಎಲ್ಲಾ ಸೌಲಭ್ಯಗಳಿಗೆ ಪ್ರತ್ಯೇಕವಾಗಿ ಭರಿಸಿದ ವೆಚ್ಚದ ಬಗ್ಗೆ ಹಾಗೂ ಯೋಜನಾವಾರು ಬಜೆಟ್ ರೂಪಿಸಿರುವುದನ್ನು ವಿವರವಾಗಿ ಮಂಡಳಿಯ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು.

ನೋಂದಾಯಿತ ಕಟ್ಟಡ ಕಾರ್ಮಿಕರನ್ನು ಗ್ರೂಪ್ ಇನ್ಸೂರೆನ್ಸ್ ಪಾಲಿಸಿ ಯೋಜನೆಗೆ ಒಳಪಡಿಸುವ ಬಗ್ಗೆ ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಗ್ರೂಪ್ ಇನ್ಸೂರೆನ್ಸ್ ಪಾಲಿಸಿಗೆ ಕಟ್ಟಡ ಕಾರ್ಮಿಕರನ್ನು ಒಳಪಡಿಸುವ ಕುರಿತು ಕೂಲಂಕಷವಾದ ಅಧ್ಯಯನವನ್ನು ನಡೆಸುವುದು ಸೂಕ್ತವೆಂದು ಮಾನ್ಯ ಅಧ್ಯಕ್ಷರು ಅಭಿಪ್ರಾಯ ವ್ಯಕ್ತಪಡಿಸಿದರು.

2022-23 ನೇ ಸಾಲಿಗಾಗಿ ವಿವಿಧ ಯೋಜನಾವಾರು ರೂಪಿಸಲಾದ ಬಜೆಟ್ ವಿವರಗಳ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ, 2022-23 ನೇ ಸಾಲಿನಲ್ಲಿ ನಿರೀಕ್ಷಿಸಿರುವ ರೂ.2646.30 ಕೋಟಿಗಳಷ್ಟು ಆದಾಯ ಮತ್ತು ರೂ.2645.21 ಕೋಟಿಗಳಷ್ಟು ಖರ್ಚು ವೆಚ್ಚಗಳೆಂದು ತಯಾರಿಸಲಾದ ಆಯವ್ಯಯಕ್ಕೆ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**2022-23 ನೇ ಸಾಲಿಗಾಗಿ ವಿವಿಧ ಯೋಜನಾವಾರು ರೂಪಿಸಲಾದ ಬಜೆಟ್ ವಿವರಗಳ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ, 2022-23 ನೇ ಸಾಲಿನಲ್ಲಿ ನಿರೀಕ್ಷಿಸಿರುವ ರೂ. 2646-30 ಕೋಟಿಗಳಷ್ಟು ಆದಾಯ ಮತ್ತು ರೂ. 2645-21 ಕೋಟಿಗಳಷ್ಟು ಖರ್ಚು ವೆಚ್ಚಗಳೆಂದು ಹಾಗೂ ರೂ.1.09 ಕೋಟಿ ಉಳಿತಾಯ ಆಯವ್ಯಯಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-03

**ಮಂಡಳಿಯ 2020-2021 ನೇ ಸಾಲಿನ ಮಂಡಳಿಯ ಸ್ವೀಕೃತಿ ಮತ್ತು ವೆಚ್ಚಕ್ಕೆ ಅನುಮೋದನೆ ನೀಡುವ ಕುರಿತು**

ಮಂಡಳಿಯು ನೇಮಿಸಿಕೊಂಡ ಚಾರ್ಟರ್ಡ್ ಅಕೌಂಟೆಂಟ್‌ರವರು ಮಂಡಳಿಯ 2020-21ನೇ ಸಾಲಿನ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ ದಿನಾಂಕ: 10.01.2022 ರಂದು ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಲೆಕ್ಕಪತ್ರಗಳನ್ನು ಮಂಡಳಿಯ ಅನುಮೋದನೆಗೆ ಮಂಡಿಸಿ ತದನಂತರ ಮಂಡಳಿಯ 2020-21ನೇ ಸಾಲಿನ ಲೆಕ್ಕ ಪತ್ರಗಳನ್ನು ಪ್ರಧಾನ ಮಹಾಲೇಖಪಾಲರು (ಆಡಿಟ್-1), ಬೆಂಗಳೂರು ರವರಿಗೆ ಲೆಕ್ಕ ಪರಿಶೋಧನೆಗಾಗಿ ಸಲ್ಲಿಸಬೇಕಾಗಿರುವುದರಿಂದ ಸಭೆಯ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

2020-21ನೇ ಸಾಲಿನ ಒಟ್ಟು ಸ್ವೀಕೃತಿ ರೂ.759,21,09,434/-

2020-21 ಸಾಲಿನ ಒಟ್ಟು ವೆಚ್ಚ ರೂ.1106,32,72,578

**ತೀರ್ಮಾನ:**

**ಈ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ 2020-2021 ನೇ ಸಾಲಿನ ಮಂಡಳಿಯ ಸ್ವೀಕೃತಿ ಮತ್ತು ವೆಚ್ಚಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-04

**2021-2022 ನೇ ಸಾಲಿನ ಮಂಡಳಿಯ ವಾರ್ಷಿಕ ಲೆಕ್ಕ ಪತ್ರ ತಯಾರಿಸಲು ಸಂಸ್ಥೆಯನ್ನು ಆಯ್ಕೆ ಮಾಡುವ ಕುರಿತು**

ಮಂಡಳಿಯ 2021-22ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸುವ ಸಲುವಾಗಿ ಹಾಗೂ ಆದಾಯ ತೆರಿಗೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಂಡಳಿಯ ಪರವಾಗಿ ಆದಾಯ ತೆರಿಗೆ ಇಲಾಖೆ ಮುಂದೆ ಪ್ರತಿನಿಧಿಸಲು ಬೇಕಾದ ಮಾಹಿತಿ, ಪತ್ರ ವ್ಯವಹಾರಗಳು ತತ್ಸಂಬಂಧಿತ ಕೆಲಸ ಕಾರ್ಯಗಳನ್ನು ನಿರಂತರವಾಗಿ ನಿರ್ವಹಿಸಲು ನುರಿತ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯವರನ್ನು ಟೆಂಡರ್ ಆಧಾರದ ಮೇಲೆ ಮಂಡಳಿಯ ಕೇಂದ್ರ ಕಛೇರಿಗೆ ನೇಮಿಸಿಕೊಳ್ಳಲು ಟೆಂಡರ್ ಕರೆಯಲಾಗಿದ್ದು, ಮೆ॥ ಪೂಜಾರ್ ಅಸೋಸಿಯೇಟ್ಸ್, ಬೆಂಗಳೂರು ಇವರು ಆಯ್ಕೆಯಾಗಿದ್ದು ಇವರನ್ನು ನೇಮಿಸಿಕೊಳ್ಳುವ ಬಗ್ಗೆ ಸಭೆಯ ಅವಗಾಹನೆಗಾಗಿ ಹಾಗೂ ಸಭೆಯ ನಿರ್ಣಯಕ್ಕೆ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

ತೀರ್ಮಾನ:

ಈ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ 2021-22ನೇ ಸಾಲಿನ ಮಂಡಳಿಯ ಸ್ವೀಕೃತಿ ಮತ್ತು ವೆಚ್ಚ ಲೆಕ್ಕಪತ್ರ ತಯಾರಿಸಲು ಟೆಂಡರ್ ಮುಖಾಂತರ ಮೆ॥ ಪೂಜಾರ್ ಅಸೋಸಿಯೇಟ್ಸ್, ಬೆಂಗಳೂರು ಇವರು ಆಯ್ಕೆಯಾಗಿದ್ದು ಇವರನ್ನು ನೇಮಿಸಿಕೊಳ್ಳಲು ಸಭೆಯ ಸದಸ್ಯರೆಲ್ಲರು ಸರ್ವಾನುಮತದಿಂದ ಒಪ್ಪಿಗೆ ನೀಡಿದರು.

## ವಿಷಯ ಸಂಖ್ಯೆ-05

**ಮಂಡಳಿಯ ಹಾಗೂ ಅಧೀನ ಕಛೇರಿಗಳ 2020-2021, 2021-2022 ನೇ ಸಾಲಿನ ಆಂತರಿಕ ಲೆಕ್ಕ ಪರಿಶೋಧನೆ ಮಾಡಲು Chartered Accountant Firm ಅನ್ನು ಟೆಂಡರ್ ಕರೆದು ನೇಮಿಸುವ ಕುರಿತು**

2020-21 ಮತ್ತು 2021-22 ನೇ ಸಾಲಿಗಾಗಿ ಮಂಡಳಿಯ ಕೇಂದ್ರ ಕಛೇರಿ ಮತ್ತು ರಾಜ್ಯಾದ್ಯಂತ 52 ಅಧೀನ ಕಛೇರಿಗಳ ಲೆಕ್ಕಪತ್ರಗಳನ್ನು ಆಂತರಿಕ ಲೆಕ್ಕಪರಿಶೋಧನೆ ಮಾಡಲು ನುರಿತ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯವರನ್ನು ಟೆಂಡರ್ ಕರೆದು ನೇಮಿಸಿಕೊಳ್ಳಲು ಸಭೆಯ ಅವಗಾಹನೆಗಾಗಿ ಹಾಗೂ ಸಭೆಯ ನಿರ್ಣಯಕ್ಕಾಗಿ ಕಾರ್ಯದರ್ಶಿಯವರು ಮಂಡಿಸಿದರು.

ತೀರ್ಮಾನ:

ಈ ವಿಷಯದ ಕುರಿತು ಸನ್ಮಾನ್ಯ ಸಚಿವರು ಮಾತನಾಡಿ, ಟೆಂಡರ್ ಕರೆದು ನುರಿತ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯವರನ್ನು ಲೆಕ್ಕಪತ್ರಗಳ ಆಂತರಿಕ ಪರಿಶೋಧನಾ ಕಾರ್ಯಗಳಿಗಾಗಿ ನೇಮಿಸಿಕೊಳ್ಳಬಹುದೆಂದು ತಿಳಿಸಿದರು. ಇದಕ್ಕೆ ಸದಸ್ಯರೆಲ್ಲರೂ ಸಹಮತ ವ್ಯಕ್ತಪಡಿಸಿದರು.

## ವಿಷಯ ಸಂಖ್ಯೆ-06

**ಮಂಡಳಿಯ ಸುಂಕ ನಿಧಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ ಇರಿಸಿರುವ ಕುರಿತು ಘಟನೋತ್ತರ ಅನುಮೋದನೆ ನೀಡುವ ಕುರಿತು**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು
ನಿಶ್ಚಿತ ಠೇವಣಿ ಇಟ್ಟಿರುವ ಹಣದ ವಿವರ

| ಕ್ರ.ಸಂ | FD ಇಟ್ಟಿರುವ ಖಾತೆ ಸಂಖ್ಯೆ | ಬ್ಯಾಂಕ್ ಗಳ ವಿವರಗಳು | No of FD's | FD ಇಟ್ಟಿರುವ ದಿನಾಂಕ | FD ಇಟ್ಟಿರುವ ಮೊತ್ತ ರೂ. | ಬಡ್ಡಿ ದರ |
|---|---|---|---|---|---|---|
| 01 | 1371401004604 (Linked to79786 A/c) | ಕೆನರಾ ಬ್ಯಾಂಕ್ ಹೊಂಬೆಗೌಡ ನಗರ ಶಾಖೆ | 1274 | 22.06.2021 ರಿಂದ 30.01.2022 ರವರೆಗೆ | 1241,12,10,339/- | 5.10 % |
| 02 | 1371401004605 (Linked to 81360 A/c) | ಕೆನರಾ ಬ್ಯಾಂಕ್ ಹೊಂಬೆಗೌಡ ನಗರ ಶಾಖೆ | 09 | 12.10.2021 ರಿಂದ 30.01.2022 ರವರೆಗೆ | 12,68,94,742/- | 5.10 % |

| | | | | | | |
|---|---|---|---|---|---|---|
| 03 | 1371401003636/3862 2021-22 ನೇ ಸಾಲಿನ ಠೇವಣಿಗಳು | ಕೆನರಾ ಬ್ಯಾಂಕ್ ಹೊಂಬೆಗೌಡ ನಗರ ಶಾಖೆ | 977 | 12.09.2021 ರಿಂದ 30.01.2022 ರವರೆಗೆ | 976,28,00,618/- | 5.10 % |
| 04 | 1371441000013/1 (Non callable FD) | ಕೆನರಾ ಬ್ಯಾಂಕ್ ಹೊಂಬೆಗೌಡ ನಗರ ಶಾಖೆ | 01 | 20/06/2021 ರಿಂದ 20/06/2022 | 500,00,00,000/- | 3.81 % |
| 05 | 1371441000014/1 (Non callable FD) | ಕೆನರಾ ಬ್ಯಾಂಕ್ ಹೊಂಬೆಗೌಡ ನಗರ ಶಾಖೆ | 01 | 03/07/2021 ರಿಂದ 03/07/2022 | 1000,00,00,000/- | 3.81 % |
| 06 | 1371441000014/2 (Non callable FD) | ಕೆನರಾ ಬ್ಯಾಂಕ್ ಹೊಂಬೆಗೌಡ ನಗರ ಶಾಖೆ | 01 | 03/07/2021 ರಿಂದ 03/07/2022 | 500,00,00,000/- | 3.81 % |
| 07 | 71423030000124 (Non callable FD) | ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಜಲಭವನ ಶಾಖೆ | 01 | 14/07/2021 ರಿಂದ 14/07/2022 | 687,00,00,000/- | 3.70 % |
| 08 | 66503000025892 (Non callable FD) | ಬ್ಯಾಂಕ್ ಆಫ್ ಬರೋಡ ಬ್ರಿಗೇಡ್ ರೋಡ್ ಶಾಖೆ | 01 | 13/08/2021 ರಿಂದ 13/08/2022 | 1000,00,00,000/- | 3.55 % |
| 09 | 51903000023642 (Non callable FD) | ಬ್ಯಾಂಕ್ ಆಫ್ ಬರೋಡ ಕೆ.ಜಿ ರೋಡ್ ಶಾಖೆ | 01 | 27/08/2021 ರಿಂದ 27/08/2022 | 500,00,00,000/- | 3.65 % |
| 10 | 71423030000227 (Non callable FD) | ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಜಲಭವನ ಶಾಖೆ | 01 | 06/12/2021 ರಿಂದ 06/12/2022 | 500,00,00,000/- | 3.81 % |
| 11 | 73890100026129 | ಬ್ಯಾಂಕ್ ಆಫ್ ಬರೋಡ ಮೆಯೋ ಹಾಲ್ ಶಾಖೆ | 139 | 01/04/2021 ರಿಂದ 30/01/2022 | 185,00,00,000/- | 5.0 % |
| ಒಟ್ಟು | | | 2406 | | 7102,09,05,699/- | |

ಮಂಡಳಿಯ ಜಂಟಿಕಾರ್ಯದರ್ಶಿಗಳು ಈ ವಿಷಯದ ಬಗ್ಗೆ **ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ತೀರ್ಪನ್ನು ಸಭೆಯ ಗಮನಕ್ಕೆ ತರುತ್ತಾ, ಸದರಿ ಆದೇಶದನುಸಾರ ನಿಶ್ಚಿತ ಠೇವಣಿಗಳನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮಾತ್ರ ಠೇವಣಿ ಮಾಡಬೇಕೆಂದು ತಿಳಿಸಲಾಗಿರುತ್ತದೆಂದು** ಹೇಳಿ ತೀರ್ಪಿನ ವಿವರವನ್ನು ಸಭೆಯಲ್ಲಿ ಓದಿ ತಿಳಿಸಿದರು.

ಮಂಡಳಿಯ ಸುಂಕ ನಿಧಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ ಇರಿಸಿರುವ ಕುರಿತು ಘಟನೋತ್ತರ ಅನುಮೋದನೆ ನೀಡುವಂತೆ ಅವಗಾಹನೆಗಾಗಿ ಹಾಗೂ ಸಭೆಯ ನಿರ್ಣಯಕ್ಕಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ವಿಷಯದ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ಆದೇಶದನ್ವಯ ಮಂಡಳಿಯ ಸುಂಕ ನಿಧಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಇರಿಸಿರುವ ಕುರಿತು ಸನ್ಮಾನ್ಯ ಅಧ್ಯಕ್ಷರನ್ನು ಒಳಗೊಂಡ ಸದಸ್ಯರ ಸಭೆಯು ಸರ್ವಾನುಮತದಿಂದ ಘಟನೋತ್ತರ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-07

**ಮಂಡಳಿಯ ಆದಾಯ ತೆರಿಗೆ ಕಾಯ್ದೆಯ ಪರಿಚ್ಛೇದ 10(46) ರಡಿಯಲ್ಲಿ ತೆರಿಗೆ ವಿನಾಯಿತಿ ಪಡೆಯಲು ಈಗಾಗಲೇ ಪರಿಚ್ಛೇಧ 12AA ರಡಿಯಲ್ಲಿ ನೋಂದಾಯಿಸಿಕೊಂಡಿರುವುದನ್ನು 10(46) ಕ್ಕೆ ಸ್ಥಾನಪಲ್ಲಟ ಮಾಡಿ ಅಧಿಸೂಚನೆ ಹೊರಡಿಸಲು ಮಂಡಳಿಗೆ ಒಪ್ಪಿಗೆ ಕೊಡುವ ಕುರಿತು.**

ಆದಾಯ ತೆರಿಗೆ ಕಾಯ್ದೆಯ ಪರಿಚ್ಛೇದ 10(46) ರಡಿಯಲ್ಲಿ ಮಂಡಳಿಯು ಆದಾಯ ತೆರಿಗೆಯಿಂದ ವಿನಾಯಿತಿ ಪಡೆಯಲು ಕೇಂದ್ರ ಹಣಕಾಸು ಇಲಾಖೆಗೆ ದಿನಾಂಕ: 28.08.2018 ರಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಆದರೆ, ಮಂಡಳಿಯು ಪರಿಚ್ಛೇದ 12AA ರಡಿಯಲ್ಲಿ ದಿನಾಂಕ: 30.09.2008 ರಲ್ಲಿ ನೋಂದಾಯಿಸಿಕೊಂಡಿರುವುದರಿಂದ 10(46) ರಡಿಯಲ್ಲಿ ವಿನಾಯಿತಿ ಪಡೆಯಲು ಬರುವುದಿಲ್ಲವೆಂದು ದಿನಾಂಕ: 25.09.2019 ರಂದು ತಿಳಿಸಲಾಗಿರುತ್ತದೆ. ಈ ನಡುವೆ ಕೇಂದ್ರ ಸರ್ಕಾರವು 2020ನೇ ಸಾಲಿನ ಹಣಕಾಸು ಕಾಯ್ದೆಯಲ್ಲಿನ ಪರಿಚ್ಛೇದ 11(7) ಕ್ಕೆ ತಿದ್ದುಪಡಿ ತಂದು ಅದರನ್ವಯ 12AA ರಡಿಯಲ್ಲಿ ನೋಂದಾಯಿತವಾಗಿದ್ದ ಸಂಸ್ಥೆಗಳೂ ಸಹಾ 10(46) ರಡಿಯಲ್ಲಿ ವಿನಾಯಿತಿ ಪಡೆಯಬಹುದೆಂದು ತಿದ್ದುಪಡಿ ತಂದ ಹಿನ್ನಲೆಯಲ್ಲಿ ಮಂಡಳಿಯು ದಿನಾಂಕ: 28.09.2020 ರಂದು ಮತ್ತೊಮ್ಮೆ ಮನವಿ ಸಲ್ಲಿಸಿತ್ತು. ಇದಕ್ಕೆ ಪ್ರತ್ಯುತ್ತರವಾಗಿ ಕೇಂದ್ರ ಹಣಕಾಸು ಇಲಾಖೆ ದಿನಾಂಕ: 20.10.2020ರ ಪತ್ರದಲ್ಲಿ ಈಗಾಗಲೇ 12AA ರಡಿಯಲ್ಲಿ ನೋಂದಾಯಿಸಿಕೊಂಡಿರುವುದನ್ನು ರದ್ದುಪಡಿಸಲು ಮಂಡಳಿಯು ಒಪ್ಪಿಗೆ ಸಲ್ಲಿಸಿದರೆ 10(46) ರಡಿಯಲ್ಲಿ ಅಧಿಸೂಚನೆ ಹೊರಡಿಸಬಹುದೆಂದು ತಿಳಿಸಿರುತ್ತದೆ. ಈ ಸಂಬಂಧ ಮಂಡಳಿಯು ದಿನಾಂಕ: 25.01.2022 ರ ಪತ್ರದಲ್ಲಿ ಪರಿಚ್ಛೇದ 12AA ರಿಂದ ಪರಿಚ್ಛೇದ 10(46) ಕ್ಕೆ ಸ್ಥಾನಪಲ್ಲಟ ಮಾಡಬಹುದೆಂದು ತಿಳಿಸಲಾಗಿದೆ. ಸದರಿ ವಿಷಯವನ್ನು ಸಭೆಯ ಅವಗಾಹನೆಗಾಗಿ ಹಾಗೂ ಸಭೆಯ ನಿರ್ಣಯಕ್ಕಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಕೇಂದ್ರ ಹಣಕಾಸು ಇಲಾಖೆ ದಿನಾಂಕ: 20.10.2020ರ ಪತ್ರದಲ್ಲಿ ತಿಳಿಸಿರುವಂತೆ ಈಗಾಗಲೇ 12AA ರಡಿಯಲ್ಲಿ ನೋಂದಾಯಿಸಿಕೊಂಡಿರುವುದನ್ನು ರದ್ದುಪಡಿಸಿಕೊಂಡು, ತದನಂತರ 10(46) ರಡಿಯಲ್ಲಿ ಅಧಿಸೂಚನೆ ಹೊರಡಿಸುವ ಬಗ್ಗೆ ಮಂಡಳಿಯ ಸದಸ್ಯರೆಲ್ಲರೂ ಒಪ್ಪಿ ಸರ್ವಾನುಮತದಿಂದ ಅನುಮೋದನೆ ನೀಡಿದರು.**

## ವಿಷಯ ಸಂಖ್ಯೆ-08

**ಮಂಡಳಿಯ ಫಲಾನುಭವಿಗಳ ಮಕ್ಕಳು UPSC / KPSC ಪರೀಕ್ಷೆಗೆ ಭಾಗಿಯಾಗಲು ಮಂಡಳಿಯ ವತಿಯಿಂದ ಅವರಿಗೆ Stipend ನಿಗದಿಪಡಿಸುವ ಕುರಿತು**

ಮಂಡಳಿಯ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳು ಸರ್ಕಾರಿ ಅಥವಾ ಇತರೆ ಉತ್ತಮ ಉದ್ಯೋಗಗಳಲ್ಲಿ ಆಯ್ಕೆಯಾಗಲು ಅಗತ್ಯ ತರಬೇತಿ ನೀಡುವ ಅವಶ್ಯಕತೆ ಇರುತ್ತದೆ. ಆದ್ದರಿಂದ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ನುರಿತ ಸ್ಪರ್ಧಾತ್ಮಕ ತರಬೇತಿ ಸಂಸ್ಥೆಗಳ ಸಹಯೋಗದೊಂದಿಗೆ ತರಬೇತಿ ಶಿಬಿರಗಳನ್ನು ಉಚಿತವಾಗಿ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಆಯೋಜಿಸಲು ತೀರ್ಮಾನಿಸಿ ವಿಶೇಷ ಯೋಜನೆಯನ್ನು ರೂಪಿಸಲಾಗಿರುತ್ತದೆ.

ಮಂಡಳಿಯ 2020-21ನೇ ಸಾಲಿನ ಆಯವ್ಯಯದಲ್ಲಿ Shrama Samarthya of the dependents ಯೋಜನೆಯಡಿ ರೂ.10.00 ಕೋಟಿ ಮೊತ್ತವನ್ನು ಮೀಸಲಿರಿಸಿ, ಮಂಡಳಿ ಮತ್ತು ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿರುತ್ತದೆ.

ಈ ಕುರಿತು ದಿನಾಂಕ: 30-09-2020ರಂದು ನಡೆದ ಮಂಡಳಿಯ 30ನೇ ಸಭೆಯಲ್ಲಿ ಚರ್ಚಿಸಿದ್ದು, ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಬೆಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡ ಕೇಂದ್ರಗಳಲ್ಲಿ ತರಬೇತಿ ಕಾರ್ಯಕ್ರಮ ಏರ್ಪಡಿಸಲು ಅನುಮೋದನೆ ನೀಡಲಾಗಿರುತ್ತದೆ.

ಅದರಂತೆ, ತರಬೇತಿ ನೀಡಲು ಅರ್ಹ ಸಂಸ್ಥೆಗಳ ಆಯ್ಕೆ ಕಾರ್ಯವು ಪ್ರಗತಿಯಲ್ಲಿರುತ್ತದೆ. ಅಲ್ಲದೆ ಆಸಕ್ತ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಂದ ಪ್ರಸ್ತುತ ಈ ರೀತಿಯ ತರಬೇತಿ ನೀಡುವ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯು ಅಭ್ಯರ್ಥಿಗಳಿಗೆ ಶಿಷ್ಯವೇತನ (Stipend) ನೀಡುತ್ತಿದ್ದು, ಅದರ ವಿವರಗಳು ಈ ಕೆಳಕಂಡಂತಿರುತ್ತವೆ.

| ತರಬೇತಿ ವಿವರ | ತರಬೇತಿ ನಡೆಯುವ ಸ್ಥಳ | ಶಿಷ್ಯವೇತನ (ರೂ.ಗಳಲ್ಲಿ) | ಪ್ರಯಾಣ ಭತ್ಯೆ (ರೂ.ಗಳಲ್ಲಿ) |
|---|---|---|---|
| **UPSC** | ಬೆಂಗಳೂರು | 6000/- | 1000/- |
| | ಇತರೆ ಸ್ಥಳಗಳು | 5000/- | - |
| **KPSC** | ಬೆಂಗಳೂರು | ಹೊರ ಜಿಲ್ಲೆಯ ಅಭ್ಯರ್ಥಿಗಳಲ್ಲಿ ರೂ.5,000/- | |
| | ಧಾರವಾಡ | ಸ್ಥಳೀಯ ಅಭ್ಯರ್ಥಿಗಳಿಗೆ ರೂ.4,000/- | |

ಮೇಲಿನ ವಿವರಗಳನ್ವಯ ಮಂಡಳಿಯ ವತಿಯಿಂದ ತರಬೇತಿ ನೀಡುತ್ತಿರುವ ಅಭ್ಯರ್ಥಿಗಳಿಗೆ ಶಿಷ್ಯವೇತನ ನಿಗದಿ ಪಡಿಸಬೇಕಾಗಿದೆ ಎಂಬ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಸುದೀರ್ಘವಾದ ಚರ್ಚಿಸಿದ ನಂತರ ಸಮಾಜ ಕಲ್ಯಾಣ ಇಲಾಖೆಯಿಂದ 2021-22ನೇ ಸಾಲಿನಲ್ಲಿ ತರಬೇತಿ ಪಡೆಯಲು ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ನೀಡುವ ಶಿಷ್ಯ ವೇತನದ ದರದಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೀಡಲಾಗುವ ತರಬೇತಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೂ ಅದೇ ದರದಲ್ಲಿ ಶಿಷ್ಯವೇತನ ಹಾಗೂ ಯುಪಿಎಸ್‌ಸಿ ತರಬೇತಿಗೆ ಬೆಂಗಳೂರಿನಲ್ಲಿ ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ಒಂದು ಬಾರಿ ಮಾತ್ರ ರೂ.1000/- ಪ್ರಯಾಣ ಭತ್ಯೆ ನೀಡಲು ಮಂಡಳಿಯ ಅಧ್ಯಕ್ಷರೊಳಗೊಂಡ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿದರು.**

## ವಿಷಯ ಸಂಖ್ಯೆ-09

**BMTC ಸಂಸ್ಥೆಯವರು 2021-22 ನೇ ಸಾಲಿನಲ್ಲಿ ನೋದಾಯಿತ ಕಟ್ಟಡ ಕಾರ್ಮಿಕರಿಗೆ ಉಚಿತ BMTC ಬಸ್ ಪಾಸ್‌ಗಳನ್ನು ವಿತರಿಸುವಾಗ ಬಸ್‌ಪಾಸ್ ವೆಚ್ಚದ ಶೇ. 20 ರಷ್ಟು ಮೊತ್ತವನ್ನು ಭರಿಸಲು ಸಾದ್ಯವಿಲ್ಲವೆಂದು ತಿಳಿಸಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ಕುರಿತು.**

ದಿನಾಂಕ:22-09-2021 ರಂದು ನಡೆದ ಮಂಡಳಿಯ 34ನೇ ಸಭೆಯಲ್ಲಿ ಮಂಡಳಿಯ ನೋಂದಾಯಿತ ಕಟ್ಟಡ ಕಾರ್ಮಿಕರುಗಳಿಗೆ 2021-22ನೇ ಸಾಲಿನಲ್ಲಿ ಉಚಿತ ಬಿಎಂಟಿಸಿ ಬಸ್‌ಪಾಸ್‌ಗಳನ್ನು ವಿತರಿಸಲು ಹಾಗೂ ಬಸ್‌ಪಾಸ್ ವೆಚ್ಚದ ಶೇ.20ರಷ್ಟು ಮೊತ್ತವನ್ನು ಬಿಎಂಟಿಸಿ ಸಂಸ್ಥೆಯೇ ಭರಿಸಲು ತಿಳಿಸಿ ಅನುಮೋದನೆ ನೀಡಲಾಗಿತ್ತು.

ಅದರಂತೆ, ಬಿಎಂಟಿಸಿ ಸಂಸ್ಥೆಗೆ 2021-22ನೇ ಸಾಲಿನಲ್ಲಿ ಬಸ್‌ಪಾಸ್‌ಗಳನ್ನು ವಿತರಿಸಲು ಅನುಮತಿ ನೀಡಿ ಶೇ.20ರಷ್ಟು ಮೊತ್ತವನ್ನು ತಮ್ಮ ಸಂಸ್ಥೆಯೇ ಭರಿಸಬೇಕೆಂಬ ಷರತ್ತನ್ನು ವಿಧಿಸಿ ಮಂಡಳಿಯಿಂದ ದಿನಾಂಕ:30-11-2021 ರಂದು ಪತ್ರ ಬರೆಯಲಾಗಿತ್ತು. ಆದರೆ, ಬಿಎಂಟಿಸಿ ಸಂಸ್ಥೆಯವರು ಮಂಡಳಿಗೆ ಪತ್ರ ಮುಖೇನ ಸಂಸ್ಥೆಯು ಪ್ರಸ್ತುತ ಪರಿಸ್ಥಿತಿಯಲ್ಲಿ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದು, ಇದರಿಂದಾಗಿ ಶೇ.20ರಷ್ಟು ಮೊತ್ತವನ್ನು ಭರಿಸಲು ಸಾಧ್ಯವಿರದ ಕಾರಣ ಪೂರ್ಣ ಮೊತ್ತವನ್ನು ಮಂಡಳಿಯೇ ಭರಿಸಬೇಕೆಂದು ಕೋರಿರುತ್ತಾರೆ. ಈ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಬಗ್ಗೆ ಮಂಡಳಿಯ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಬಿಎಂಟಿಸಿ ಸಂಸ್ಥೆಯವರು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದು, ಶೇ.20 ರಷ್ಟು ಮೊತ್ತವನ್ನು ಭರಿಸಲು ಸಾಧ್ಯವಿಲ್ಲದ ಕಾರಣ ಹಾಗೂ ಬಸ್‌ಪಾಸ್ ನೀಡುವುದರಿಂದ ಕಟ್ಟಡ ಕಾರ್ಮಿಕರಿಗೆ ತುಂಬಾ ಅನುಕೂಲವಾಗುವುದರಿಂದ ಪೂರ್ಣ ಮೊತ್ತವನ್ನು ಮಂಡಳಿಯೇ ಭರಿಸುವುದು ಸೂಕ್ತವೆಂದು ಅಧ್ಯಕ್ಷರು ತಿಳಸಲು ಸಭೆಯಲ್ಲಿಯ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿದರು.**

## ವಿಷಯ ಸಂಖ್ಯೆ-10

**ಮಂಡಳಿಯ ಫಲಾನುಭವಿಗಳಿಗೆ NWKSRTC, NEKSRTC ಬಸ್ ಪಾಸ್ ಸೌಲಭ್ಯವನ್ನು ಅನುಷ್ಠಾನಗೊಳಿಸುವ ಕುರಿತು.**

ಮಂಡಳಿಯಿಂದ ಪ್ರಸ್ತುತ ಬೆಂಗಳೂರು ನಗರ ವ್ಯಾಪ್ತಿಯ ನೋಂದಾಯಿತ ಕಟ್ಟಡ ಕಾರ್ಮಿಕರ ಪ್ರಯಾಣದ ಅನುಕೂಲಕ್ಕಾಗಿ ಉಚಿತ ಬಿಎಂಟಿಸಿ ಬಸ್‌ಪಾಸ್‌ಗಳನ್ನು ವಿತರಿಸುವ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಉಳಿದ ಪ್ರದೇಶಗಳ ವ್ಯಾಪ್ತಿಯ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಬಸ್‌ಪಾಸ್ ಸೌಲಭ್ಯ ಇರುವುದಿಲ್ಲ.

ಆದಕಾರಣ, ರಾಜ್ಯದ ಉಳಿದ ಪ್ರದೇಶಗಳಲ್ಲಿ ಹೆಚ್ಚಿನ ಸಾರಿಗೆ ವ್ಯವಸ್ಥೆ ಹೊಂದಿರುವಂತಹ KSRTC, NWKSRTC & NEKSRTC ಸಂಸ್ಥೆಗಳ ಸಹಯೋಗದೊಂದಿಗೆ ಮಂಡಳಿಯ ನೋಂದಾಯಿತ ಕಟ್ಟಡ ಕಾರ್ಮಿಕರು ಕೆಲಸದ ನಿಮಿತ್ತ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಉಚಿತವಾಗಿ ಪ್ರಯಾಣಿಸಲು ಅನುಕೂಲ ಕಲ್ಪಿಸಬಹುದಾಗಿರುತ್ತದೆ. ಇದರಿಂದಾಗಿ ಕಾರ್ಮಿಕರಿಗೆ ಆರ್ಥಿಕವಾಗಿ ಸಹಾಯ ಮಾಡಿದಂತಾಗುವುದು ಮತ್ತು ಸುರಕ್ಷಿತವಾಗಿ ಕೆಲಸದ ಸ್ಥಳಗಳಿಗೆ ಪ್ರಯಾಣಿಸಿ ಹಿಂದಿರುಗಬಹುದಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮಂಡಳಿಯ ನೋಂದಾಯಿತ ಕಟ್ಟಡ ಕಾರ್ಮಿಕರು ಸೀಮಿತ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಉಚಿತವಾಗಿ KSRTC, NWKSRTC & NEKSRTC ಸಂಸ್ಥೆಯ ಬಸ್‌ಗಳಲ್ಲಿ ಪ್ರಯಾಣಿಸಲು ಅನುಕೂಲವಾಗಲು ಮಾಸಿಕ ಬಸ್‌ಪಾಸ್ ಯೋಜನೆಯನ್ನು ಅನುಷ್ಠಾನಗೊಳಿಸಬಹುದಾಗಿರುತ್ತದೆ,

ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಬಗ್ಗೆ ಸಭೆಯಲ್ಲಿ ಸನ್ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರು ಚರ್ಚಿಸುತ್ತಾ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ, ಧಾರವಾಡ, ಕಾರವಾರ, ಶಿವಮೊಗ್ಗ ಜಿಲ್ಲೆಗಳನ್ನು ಒಳಗೊಂಡಂತೆ KSRTC, NWKSRTC ಮತ್ತು NEKSRTC ಅಧಿಕಾರಿಗಳೊಂದಿಗೆ ವಿಸ್ತೃತವಾಗಿ ಚರ್ಚಿಸಿ, ತೀರ್ಮಾನ ಕೈಗೊಳ್ಳುವಂತೆ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು ಈ ನಿರ್ಧಾರಕ್ಕೆ ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು.**

## ವಿಷಯ ಸಂಖ್ಯೆ-11

**ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರು ಕಟ್ಟಡ ಕಾಮಗಾರಿ ಸ್ಥಳಗಳಲ್ಲಿ ಮೃತ ಪಟ್ಟಿದ್ದು, ಇವರ ಅವಲಂಬಿತರಿಗೆ ಅಪಘಾತ ಮರಣ ಪರಿಹಾರವನ್ನು ವಿತರಿಸಲು ಅನುಮೋದನೆ ನೀಡುವ ಹಾಗೂ ಮಾನ್ಯ ಮಂಡಳಿಯ ಅಧ್ಯಕ್ಷಕರ ಕಛೇರಿಯಲ್ಲಿ ಆಪ್ತ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದ ದಿ|| ಕಲ್ಯಾಣ ಅಗಟಗಿ ಇವರು ಕೋವಿಡ್- 19 ನಿಂದಾಗಿ ಮರಣ ಹೊಂದಿದ್ದು, ಅವರ ಅವಲಂಬಿತರಿಗೆ ಪರಿಹಾರ ಧನ ಪಾವತಿಸಿರುವ ಬಗ್ಗೆ ಘಟನೋತ್ತರ ಅನುಮೋದನೆ ಪಡೆಯುವ ಕುರಿತು.**

ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಒದಗಿಸುವ ಸಂಬಂಧ ಕಾಯ್ದೆ ಮತ್ತು ನಿಯಮಗಳಡಿ ಪ್ರಸ್ತುತ ಯಾವುದೇ ಪ್ರಾವಧಾನಗಳು ಮತ್ತು ನಿಯಮಗಳು ಇರುವುದಿಲ್ಲ. ಆದರೆ, ಈ ಹಿಂದೆ ಇಂತಹ ಪ್ರಕರಣಗಳಲ್ಲಿ ಪರಿಹಾರವನ್ನು ನೀಡಲು ಮಾನವೀಯತೆ ದೃಷ್ಟಿಯಿಂದ ಮಂಡಳಿಯ ಸನ್ಮಾನ್ಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಸದರಿ ಪ್ರಕರಣಗಳಿಗೆ ಅನುಮೋದನೆ

ನೀಡಿರುತ್ತಾರೆ. ಪ್ರಸ್ತುತ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಕೋರಿ 04 ಅರ್ಜಿಗಳು ಸ್ವೀಕೃತಗೊಂಡಿದ್ದು ಅರ್ಜಿಗಳ ವಿವರ ಈ ಕೆಳಕಂಡಂತಿರುತ್ತವೆ.

**ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಪರಿಹಾರ ನೀಡಿದ ವಿಶೇಷ ಪ್ರಕರಣಗಳ ಪಟ್ಟಿ**

**ನೋಂದಾಯಿತ ಕಟ್ಟಡ ಕಾರ್ಮಿಕರ ಅಪಘಾತ ಪ್ರಕರಣಗಳ ಪಟ್ಟಿ ಅನುಮೋದನೆಗಾಗಿ**

| ಕ್ರ. ಸಂ | ತನಿಖಾ ವರದಿ ಸಲ್ಲಿಸಿದ ಅಧಿಕಾರಿ | ಕಡತ ಸಂಖ್ಯೆ | ವಿಷಯ | ಮೃತಪಟ್ಟ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಹೆಸರು |
|---|---|---|---|---|
| 1 | ಕಾರ್ಮಿಕ ಅಧಿಕಾರಿ ರಾಮನಗರ | ಸಂಖ್ಯೆ: ಕಕಾಮಂ/ ಅಪಘಾತ/ಸಿಆರ್-11/ 2021-22 | ದಿನಾಂಕ:04-06-2021 ರಂದು ಸ್ಯಾನಿಟರಿ ಪೈಪ್ ಕಾಮಗಾರಿ ಪೂರ್ಣಗೊಂಡಿದ್ದರಿಂದ ಸ್ಯಾನಿಟರಿ ಪೈಪ್ ಲೈನ್ ನನ್ನು ಚಾಲನೆಗೊಳಸಲು ಸ್ಯಾನಿಟರಿ ಪೈಪ್‌ಲೈನ್‌ನ ಮ್ಯಾನ್ ಹೋಲ್ನಲ್ಲಿ ಅಳವಡಿಸಿದ್ದ ತಡೆಗೋಡೆಯನ್ನು ತೆಗೆದು ಚಾಲನೆಗೊಳಸಲು ಮ್ಯಾನ್ ಹೋಲ್‌ನ ಮುಚ್ಚಳ ತೆಗೆದ ಸಮಯದಲ್ಲಿ ಮ್ಯಾನ್ ಹೋಲ್‌ನ ಆಳವು ಹೆಚ್ಚಾಗಿದ್ದುದ್ದರಿಂದ ರಾಜೇಶ್ ಮ್ಯಾನ್ ಹೋಲ್‌ಗೆ ಇಳದು ತಡೆಗೋಡೆ ತೆಗೆಯುವ ಸಮಯದಲ್ಲಿ ಜ್ಞಾನ ತಪ್ಪಿ ಮ್ಯಾನ್ ಹೋಲ್‌ನಲ್ಲೇ ಬಿದ್ದು ಮೃತಪಟ್ಟಿರುತ್ತಾರೆ. | ಶ್ರೀ ರಾಜೇಶ್ (ಬೆಂಗಳೂರು) |
| 2 | ಕಾರ್ಮಿಕ ನಿರೀಕ್ಷಕರು 2ನೇ ವೃತ್ತ ದಾವಣಗೆರೆ | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-12/2021-22 | ದಿನಾಂಕ:05-02-2021 ರಂದು ದಾವಣಗೆರೆಯ ಕರೂರು ಇಂಡಸ್ಟ್ರೀಯಲ್ ಏರಿಯಾದಲ್ಲಿರುವ ಹಳ್ಳಕೇರಿ ಇಂಡಸ್ಟ್ರೀಸ್ ಫ್ಯಾಕ್ಟರಿಯ ಗೋಡೆಗಳಗೆ ಬಣ್ಣ ಬಳಯುತ್ತಿರುವಾಗ ಗೋಡೆಯ ಪಕ್ಕದಲ್ಲಿದ್ದ ವೈರ್ ತಗುಲ ಕರೆಂಟ್ ಶಾಕ್ ಆಗಿ ಸುಮಾರು 15 ಅಡಿ ಎತ್ತರದಿಂದ ಕೆಳಗೆ ಬಿದ್ದಿದ್ದು, ತಕ್ಷಣ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ: 06-02-2021 ರಂದು ಅಜಯ್ ಇವರು ಮೃತಪಟ್ಟಿರುತ್ತಾರೆ. | ಶ್ರೀ. ಅಜಯ್ (ದಾವಣಗೆರೆ) |
| 3 | ಕಾರ್ಮಿಕ ಅಧಿಕಾರಿ ಉಪ ವಿಭಾಗ-2 ಬೆಂಗಳೂರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-13/2021-22 | ದಿನಾಂಕ:24-08-2021 ರಂದು ಮುದ್ದೇಗೌಡ, ಮಾರುತಿ ನಗರ, ಸೊನ್ನೇನಹಳ್ಳ, ಕೆಂಗೇರಿ ಹೋಬಳ, ಬೆಂಗಳೂರು ಎಂಬುವವರಿಗೆ ಸಂಬಂಧಿಸಿದ ಶೆಡ್‌ನಲ್ಲಿ ಫ್ಯಾನ್‌ಗಳನ್ನು ಅಳವಡಿಸುವ ಸಂದರ್ಭದಲ್ಲಿ 20 ಅಡಿ ಎತ್ತರದಿಂದ ಶ್ರೀ ಕೃಷ್ಣ ರಾಜು ಟಿ.ಎಂ ಇವರು ಕೆಳಗೆ ಬಿದ್ದು ಅಳವಡಿಸಲು ಇಟ್ಟಿದ್ದ ಫ್ಯಾನ್ ರಾಡ್ ಸದರಿಯವರ ಹೃದಯ ಭಾಗಕ್ಕೆ ಚುಚ್ಚಿ ಸ್ಥಳದಲ್ಲಿಯೇ ಮೃತ ಪಟ್ಟಿರುತ್ತಾರೆ. | ಶ್ರೀಕೃಷ್ಣ ರಾಜು ಟಿ.ಎಂ (ಬೆಂಗಳೂರು) |

ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದರು.

ಮುಂದುವರೆದು, ಶ್ರೀ ಕಲ್ಯಾಣಿ ಅಗಟಗಿ ಇವರು ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರ ಕಛೇರಿಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಹೊರಗುತ್ತಿಗೆಯ ಮೂಲಕ ನಿಯೋಜಿತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ದಿನಾಂಕ: 10-05-2021 ರಂದು ಕೋವಿಡ್-19 ಸೋಂಕಿತರಾಗಿ ಮೃತ ಪಟ್ಟಿರುತ್ತಾರೆ. ಅವರ ಕುಟುಂಬದ ಸಾಮಾಜಿಕ ಭದ್ರತೆಯ ಹಿತದೃಷ್ಟಿಯಿಂದ ಮಂಡಳಿಯ ಹೊರಗುತ್ತಿಗೆ ಸಿಬ್ಬಂದಿಗಳಿಗೆ ನೀಡುವಂತೆಯೇ ಅವರ ಕುಟುಂಬಕ್ಕೆ ರೂ.2,00,000/- ಪರಿಹಾರವನ್ನು ನೀಡಲಾಗಿದ್ದು ಈ ಬಗ್ಗೆ ಘಟನೋತ್ತರ ಅನುಮೋದನೆಯನ್ನು ನೀಡಬೇಕೆಂದು, ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಘಟನೋತ್ತರ ಅನುಮೋದನೆ ನೀಡಲಾಯಿತು.**

## ವಿಷಯ ಸಂಖ್ಯೆ-12

**ಮಂಡಳಿಯಲ್ಲಿ ಕೆನರಾ ಬ್ಯಾಂಕ್ ಶಾಖೆಯನ್ನು ತೆರೆಯಲು ಸ್ಥಳಾವಕಾಶ ನೀಡುವ ಬಗ್ಗೆ.**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಹೆಚ್ಚಿನ ಬ್ಯಾಂಕ್ ವ್ಯವಹಾರಗಳನ್ನು ಹೊಂಬೇಗೌಡ ನಗರ ಶಾಖೆಯಲ್ಲಿ ನಿರ್ವಹಿಸಲಾಗುತ್ತಿದೆ. ಇದಲ್ಲದೇ ರಾಜ್ಯಾದ್ಯಂತ ಅಧಿಕಾರಿಗಳು ನೋಂದಾಯಿತ ಕಟ್ಟಡ ಕಾರ್ಮಿಕರ ವಿವಿಧ ಕ್ಲೇಂ ಅರ್ಜಿಗಳನ್ನು ವಿಲೇವಾರಿ ಮಾಡಿ ಧನ ಸಹಾಯವನ್ನು ಪಾವತಿ ಮಾಡಲು ಫಲಾನುಭವಿಗಳ ವಿವರಗಳನ್ನು ಸದರಿ ಶಾಖೆಗೆ ಕಳುಹಿಸುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಧನ ಸಹಾಯವನ್ನು ಫಲಾನುಭವಿಗಳ ಖಾತೆಗಳಿಗೆ ವರ್ಗಾವಣೆ ಮಾಡುವುದು ವಿಳಂಬವಾಗುತ್ತಿದ್ದು ಮಂಡಳಿಯ ಅಧಿಕಾರಿಗಳು ಖುದ್ದಾಗಿ ಶಾಖೆಗೆ ತೆರಳಿ ಅರ್ಜಿಗಳ ವಿಲೇವಾರಿಯ ಪ್ರಗತಿಯನ್ನು ಪರಿಶೀಲಿಸ ಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೆನರಾ ಬ್ಯಾಂಕ್‌ನ ಶಾಖೆಯೊಂದನ್ನು ಮಂಡಳಿಯ ಕಛೇರಿಯ ಆವರಣದಲ್ಲಿಯೇ ಪ್ರಾರಂಭಿಸಿದ್ದಲ್ಲಿ. ಮಂಡಳಿಯ ಬ್ಯಾಂಕ್ ವ್ಯವಹಾರಗಳು ಸುಗಮಗೊಳ್ಳುತ್ತವೆ ಹಾಗೂ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಧನಸಹಾಯದ ಮೊತ್ತವನ್ನು ಬ್ಯಾಂಕಿನಿಂದ ವರ್ಗಾಯಿಸುವುದನ್ನು ಖಾತರಿಪಡಿಸಿಕೊಳ್ಳಲು ಅನುಕೂಲವಾಗುತ್ತದೆ.

ಆದುದರಿಂದ, ಮಂಡಳಿಯ ನೆಲ ಮಹಡಿಯಲ್ಲಿ ಅಂದಾಜು 700 ಚದರ ಅಡಿಯ ಕೊಠಡಿಯನ್ನು ಹಾಗೂ ಈ ಕೊಠಡಿಗೆ ಹೊಂದಿಕೊಂಡಿರುವ ಅಂದಾಜು 50 ಚದರ ಅಡಿ ಮುಕ್ತ ಸ್ಥಳವನ್ನು **ಎ.ಟಿ.ಎಂ** ಸ್ಥಾಪಿಸಲು ಪ್ರತಿ ಮಾಹೆ ರೂ.5000/-ಗಳ ಬಾಡಿಗೆ ಆಧಾರದ ಮೇಲೆ ಕೆನರಾ ಬ್ಯಾಂಕ್‌ಗೆ ನೀಡುವ ವಿಷಯದ ಬಗ್ಗೆ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

ತೀರ್ಮಾನ:

**ಈ ವಿಷಯದ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಮಂಡಳಿಯ ಆವರಣದಲ್ಲಿಯೇ ಕೆನರಾ ಬ್ಯಾಂಕ್‌ನ ಶಾಖೆ ಹಾಗೂ ಎ.ಟಿ.ಎಂ. ಅನ್ನು ತೆರೆಯಲು ಅಧ್ಯಕ್ಷರು ಹಾಗೂ ಸದಸ್ಯರೆಲ್ಲರೂ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.**

## ವಿಷಯ ಸಂಖ್ಯೆ-13

**ಮಂಡಳಿಯ Social Audit ಕಾರ್ಯವನ್ನು ನಡೆಸಲು Social Audit Unit ಅನ್ನು ರಚಿಸುವ ಕುರಿತು.**

ಮಂಡಳಿಯು ಅನುಷ್ಠಾನಗೊಳಿಸುತ್ತಿರುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳು ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಪರಿಣಾಮಕಾರಿಯಾಗಿ ತಲುಪುತ್ತಿರುವ ಕುರಿತು Social Audit ಕಾರ್ಯವನ್ನು ಕೈಗೊಳ್ಳಲು Public Affair Centre ಈ ಸಂಸ್ಥೆಗೆ ವಹಿಸಲು ಸರ್ಕಾರದ ಪತ್ರ ಸಂಖ್ಯೆ: ಇ –ಕಾಇ 47 ಎಲ್‌ಇಟಿ 2019 ರಲ್ಲಿ ದಿನಾಂಕ: 05-11-2019 ರಂದು ರೂ. 67.14 ಲಕ್ಷಗಳಿಗೆ 4ಜಿ ವಿನಾಯಿತಿ ನೀಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸರ್ಕಾರದ ಆದೇಶದಂತೆ ಮಂಡಳಿಯ Social Audit ಕಾರ್ಯವನ್ನು ಕೈಗೊಳ್ಳಲು Public Affair Centre ಈ ಸಂಸ್ಥೆಗೆ ದಿನಾಂಕ: 08-07-2020 ರಂದು ಕಾರ್ಯಾದೇಶ ನೀಡಲಾಗಿದ್ದು, ಈ ಸಂಸ್ಥೆಯೊಂದಿಗೆ ದಿನಾಂಕ:03-08-2020 ರಂದು MOU ಗೆ ಸಹಿ ಮಾಡಲಾಗಿರುತ್ತದೆ.

ಆದರೆ, ಕೇಂದ್ರ ಸರ್ಕಾರದ ದಿನಾಂಕ: ಆಗಸ್ಟ್-2019 ರ ಪತ್ರ ಸಂಖ್ಯೆ:ಜೆಡ್-20012/09/2018-ಬಿಎಲ್ (ಪಿಟಿ) ರಲ್ಲಿ Social Audit ಕಾರ್ಯವನ್ನು ನಡೆಸುವ ಕುರಿತು Guidelines ಅನ್ನು ಹೊರಡಿಸಲಾಗಿದ್ದು, ಸದರಿ Guidelines ಅನ್ನು ಪರಿಶೀಲಿಸಿದಾಗ Social Audit ಕಾರ್ಯವನ್ನು Social Audit Unit ಮುಖಾಂತರವೇ ಕೈಗೊಳ್ಳುವಂತೆ ನಿರ್ದೇಶಿಸಲಾಗಿರುತ್ತದೆ.

ಅದರಂತೆ, ಈ ಕುರಿತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಮಂಡಳಿಯ ಅಧಿಕಾರಿಗಳು ಮತ್ತು Public Affair Centre ಇವರೊಂದಿಗೆ ಸಭೆಯನ್ನು ನಡೆಸಲಾಗಿ, ಸದರಿ ಸಭೆಯಲ್ಲಿ ಕೇಂದ್ರ ಸರ್ಕಾರದ ನಿರ್ದೇಶನದ ಪ್ರಕಾರ ಪ್ರಸ್ತುತ Social Audit Unit ಮುಖಾಂತರ Social Audit ಕಾರ್ಯವನ್ನು ಕೈಗೊಳ್ಳುವ ಕುರಿತು ಮುಂದಿನ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳುವಂತೆ ಸದರಿ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ಅದರಂತೆ, ಮಂಡಳಿಯ Social Audit ಕಾರ್ಯವನ್ನು ಕೈಗೊಳ್ಳಲು Social Audit Unit ಅನ್ನು ರಚಿಸುವ ವಿಷಯವನ್ನು ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

ತೀರ್ಮಾನ:

**ಈ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಅನ್ವಯ ಮಂಡಳಿಯ ಕೇಂದ್ರ ಕಛೇರಿಯಲ್ಲಿ Social Audit Unit ಸ್ಥಾಪಿಸಿ ಇದಕ್ಕೆ ಅಗತ್ಯ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಹೊರಗುತ್ತಿಗೆ ಏಜೆನ್ಸಿಗಳ ಮುಖಾಂತರ ಪಡೆದು Social Audit ಕಾರ್ಯವನ್ನು ಕೈಗೊಳ್ಳುವಂತೆ ಸೂಚಿಸಿ ಸರ್ವಾನುಮತದಿಂದ ಸಭೆಯು ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-14

**2022ನೇ ಸಾಲಿಗೆ ಎಲ್ಲಾ ಗೌರವಾನ್ವಿತ ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ, ಮಂಡಳಿಯ ಸದಸ್ಯರುಗಳಿಗೆ ಮತ್ತು ವಿವಿಧ ಕಾರ್ಮಿಕ ಸಂಘ ಸಂಸ್ಥೆಗಳಿಗೆ ಮಂಡಳಿ ವತಿಯಿಂದ ಹಂಚಿಕೆ ಮಾಡಲು ಮೆ॥ ಎಮ್.ಸಿ & ಎ ಸಂಸ್ಥೆ ಮೂಲಕ ಮುದ್ರಿಸಲಾದ ವಾರ್ಷಿಕ ಕ್ಯಾಲೆಂಡರ್‌ಗಳು, ಬುಕ್‌ಲೆಟ್‌ಗಳು ಹಾಗೂ ಹೊಸ ವರ್ಷದ Greeting ಕಾರ್ಡ್‌ಗಾಗಿ ತಗುಲಿದ ಅಂದಾಜು ಮೊತ್ತಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು**

ಮಂಡಳಿಯ ವತಿಯಿಂದ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಒಳಗೊಂಡ ವರ್ಣಮಯ ಕಿರು ಹೊತ್ತಿಗೆಯನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಸಿದ್ದಪಡಿಸಿ ಮೆ॥ ಎಂ. ಸಿ & ಎ ಸಂಸ್ಥೆಯ ವತಿಯಿಂದ ಮುದ್ರಿಸಿ ಸಾರ್ವಜನಿಕರಿಗೆ, ಜನಪ್ರತಿನಿಧಿಗಳಿಗೆ ಹಾಗೂ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ತಲುಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ವಾರ್ಷಿಕ ಕ್ಯಾಲೆಂಡರ್‌ಗಳು, ಬುಕ್‌ಲೆಟ್‌ಗಳು ಹಾಗೂ ಹೊಸ ವರ್ಷದ Greeting ಕಾರ್ಡ್‌ಗಾಗಿ ತಗಲಿದ ವೆಚ್ಚದ ವಿವರಗಳು ಈ ಕೆಳಕಂಡಂತ್ತಿರುತ್ತವೆ.

| ಕ್ರ.ಸಂ | ವಿವರ | ಮೊತ್ತ ಒಂದಕ್ಕೆ ರೂ.ಗಳಲ್ಲಿ | ಒಟ್ಟು ಮೊತ್ತ ರೂ ಗಳಲ್ಲಿ (ತೆರಿಗೆ ಹೊರತು ಪಡಿಸಿ) | ಒಟ್ಟು ಮೊತ್ತ ರೂ ಗಳಲ್ಲಿ (ತೆರಿಗೆ ಸೇರಿ) | ಸಂಖ್ಯೆ | ಹೆಸರು |
|---|---|---|---|---|---|---|
| 01 | ಕೋವಿಡ್-19 ರ ಸಂದರ್ಭದಲ್ಲಿ ಕೈಗೊಂಡ ಮಾಹಿತಿಯನ್ನೊಳಗೊಂಡ ವರ್ಣಮಯ ಕಿರುಹೊತ್ತಿಗೆ | 280 | 8,40,000/- | 9,91,200/- | 3,000 (ಕನ್ನಡ) | ಮೆ॥ ಎಂ.ಸಿ ಅಂಡ್ ಎ |
| 02 | | | 8,40,000/- | 9,91,200/- | 3,000 (ಇಂಗ್ಲೀಷ್) | |
| 03 | ಶುಭಾಶಯ ಪತ್ರ | 80 | 4,00,000/- | 4,72,000/- | 5000 | ಮೆ॥ ಎಂ.ಸಿ ಅಂಡ್ ಎ |
| 04 | ಕಾರ್ಮಿಕ ಅದಾಲತ್ ಕುರಿತ ವರ್ಣಮಯ ಕಿರುಹೊತ್ತಿಗೆ | 129 | 12,90,000/- | 15,00,000/- | 10,000 | ಮೆ॥ಎಂ.ಸಿ ಅಂಡ್ ಎ |
| 05 | ಸೆಸ್ ಪಾಂಪ್ಲೇಟ್ಸ್ | 6.5 | 3,25,000/- | 3,83,500/- | 50,000 | ಮೆ॥ ಎಂ.ಸಿ ಅಂಡ್ ಎ |
| | **ಒಟ್ಟು ಮೊತ್ತ** | | **ರೂ.43,37,900/-** | | | |

2022ನೇ ಸಾಲಿನ ಕೋವಿಡ್-19 ರ ಸಂದರ್ಭದಲ್ಲಿ ಕೈಗೊಂಡ ಮಾಹಿತಿಯನ್ನೊಳಗೊಂಡ ವರ್ಣಮಯ ಕಿರುಹೊತ್ತಿಗೆ, ಶುಭಾಶಯ ಪತ್ರ ಕಾರ್ಮಿಕ ಅದಾಲತ್ ಕುರಿತ ವರ್ಣಮಯ ಕಿರುಹೊತ್ತಿಗೆ ಮತ್ತು ಸೆಸ್ ಪಾಂಪ್ಲೇಟ್ಸ್‌ಗಳನ್ನು ಮುದ್ರಿಸಿ ರಾಜ್ಯಾದ್ಯಂತ ಜಾಗೃತಿ ಮತ್ತು ಪ್ರಚಾರ ನೀಡಲಾಗಿರುತ್ತದೆ. ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

ತೀರ್ಮಾನ:

ಸದರಿ ವಿಷಯದ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ವಾರ್ಷಿಕ ಕ್ಯಾಲೆಂಡರ್‌ಗಳು, ಬುಕ್‌ಲೆಟ್‌ಗಳು ಹಾಗೂ ಹೊಸ ವರ್ಷದ Greeting ಕಾರ್ಡ್‌ಗಳಿಗಾಗಿ ತಗುಲಿದ ವೆಚ್ಚ ರೂ.43,37,900/-ಗಳಿಗೆ ಘಟನೋತ್ತರ ಅನುಮೋದನೆಯನ್ನು ಸರ್ವಾನುಮತದಿಂದ ನೀಡಲಾಯಿತು.

## ವಿಷಯ ಸಂಖ್ಯೆ-15

**ಮಂಡಳಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿಗಳು / ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸುವ ಕುರಿತು.**

ಮಂಡಳಿಯ ಲೆಕ್ಕಪತ್ರ ಶಾಖೆಯಲ್ಲಿ ಉಪ ನಿಯಂತ್ರಕರು-01, ಸಹಾಯಕ ನಿಯಂತ್ರಕರು-02 ಹಾಗೂ ಅಕೌಂಟ್ಸ್ ಸೂಪ್ರಿಟೆಂಡೆಂಟ್-02 ಅನುಮೋದಿತ ಹುದ್ದೆಗಳಿದ್ದು ಎಲ್ಲಾ ಹುದ್ದೆಗಳು ಖಾಲಿ ಇದ್ದ ಕಾರಣ ಇಬ್ಬರು ನಿವೃತ್ತ ನೌಕರರನ್ನು ಅಕೌಂಟ್ಸ್ & ಆಡಿಟ್ ಅಡ್ವೈಸರ್ ಹಾಗೂ ಅಕೌಂಟ್ಸ್ & ಆಡಿಟ್ ಡೆಸ್ಕ್ ಆಫೀಸರ್ ಎಂದು ನೇರಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲಾಗಿರುತ್ತದೆ. ಪ್ರಸ್ತುತ ಇವರಿಗೆ ತಲಾ ಮಾಸಿಕ ರೂ 45,000/- ರಂತೆ ಗೌರವಧನವನ್ನು ಪಾವತಿಸಲಾಗುತ್ತಿರುತ್ತದೆ. ಅವರ ಗುತ್ತಿಗೆ ಅವಧಿಯು 31-03-2022 ರಂದು ಮುಕ್ತಾಯಗೊಳ್ಳುತ್ತಿದ್ದು ಪ್ರಸ್ತುತ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಒಬ್ಬರು ಸಹಾಯಕ ನಿಯಂತ್ರಕರು ಕರ್ತವ್ಯನಿರ್ವಹಿಸುತ್ತಿದ್ದಾರೆ. ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಇಬ್ಬರು ನಿವೃತ್ತ ಅಧಿಕಾರಿಗಳ ಸೇವೆಯನ್ನು ಹಾಗೂ ಮಂಡಳಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ತಾಂತ್ರಿಕ ಸಲಹೆಗಾರರು, ಕಾನೂನು ಸಲಹೆಗಾರರ ಸೇವೆಯನ್ನು ದಿನಾಂಕ 31-03-2023 ರವರೆಗೆ ಮುಂದುವರೆಸುವ ಬಗ್ಗೆ ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಬಗ್ಗೆ ಸಭೆಯಲ್ಲಿ ಸನ್ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರುಗಳು ಕೂಲಂಕಷವಾಗಿ ಚರ್ಚಿಸಿದ್ದು, ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಇಬ್ಬರು ನಿವೃತ್ತ ಅಧಿಕಾರಿಗಳ ಬದಲಾಗಿ ಹೊಸಬರಿಗೆ ಅವಕಾಶ ಕಲ್ಪಿಸಬೇಕೆಂದು ಭಾರತೀಯ ಮಜ್ದೂರು ಸಂಘದ ಅಧ್ಯಕ್ಷರಾದ ಶ್ರೀ. ವಿಶ್ವನಾಥ ಶೆಟ್ಟಿರವರು ಸಲಹೆ ನೀಡಿದರು. ಮಾನ್ಯ ಸಚಿವರಿಗೆ ಹಾಗೂ ಮಂಡಳಿಯ ಅಧ್ಯಕ್ಷರಿಗೆ ಈ ಸಂಬಂಧ ಅಧಿಕಾರ ನೀಡಿ ಸಭೆಯಲ್ಲಿ ತೀರ್ಮಾನಿಸಲಾಯಿತು.**

## ವಿಷಯ ಸಂಖ್ಯೆ-16

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಇವರ ಕಛೇರಿಯ ಕೆಲಸ ಕಾರ್ಯಕ್ಕಾಗಿ ಮಂಡಳಿಯ ವತಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಒಂದು ವಾಹನವನ್ನು ಒದಗಿಸಿರುವ ಬಗ್ಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಇವರ ಕಛೇರಿಯ ಕೆಲಸ ಕಾರ್ಯಕ್ಕಾಗಿ ಮಂಡಳಿಯ ವತಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಒಂದು ವಾಹನವನ್ನು ಮಂಡಳಿಯ ವತಿಯಿಂದ ಒದಗಿಸಲಾಗಿದೆ. ಮಾಸಿಕ ರೂ.30,000/- ಗಳಂತೆ ವಾರ್ಷಿಕ ಅಂದಾಜು ರೂ.3,60,000/- ಗಳು ಮಂಡಳಿಗೆ ಖರ್ಚಾಗುತ್ತದೆ. ಈ ವೆಚ್ಚವನ್ನು ಮಂಡಳಿಯ ಆಡಳಿತಾತ್ಮಕ

ವೆಚ್ಚದಿಂದ ಭರಿಸಲು ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಇವರ ಕಛೇರಿಯ ಕೆಲಸ ಕಾರ್ಯಕ್ಕಾಗಿ ಮಂಡಳಿಯ ವತಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಒಂದು ವಾಹನವನ್ನು ಒದಗಿಸಿರುವ ಬಗ್ಗೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-17

**ಮಂಡಳಿಯ ಎರಡನೇ ಮಹಡಿಯಲ್ಲಿ ಕಾರ್ಮಿಕ ಅಧಿಕಾರಿಗಳಿಗೆ ಹಾಗೂ ಕಾರ್ಮಿಕ ನಿರೀಕ್ಷಕರಿಗೆ ಪ್ರತ್ಯೇಕವಾದ ಸ್ಥಳಾವಕಾಶ ಒದಗಿಸಲು ಕಂಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಲು ಅನುಮೋದನೆ ನೀಡುವ ಕುರಿತು.**

ಮಂಡಳಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಜಂಟಿ ಕಾರ್ಯದರ್ಶಿಗಳ ಹುದ್ದೆಯನ್ನು ಹೊರತುಪಡಿಸಿ 04 ಉಪ ಕಾರ್ಮಿಕ ಆಯುಕ್ತರು, 01 ವಿಶೇಷ ಅಧಿಕಾರಿಗಳು, 04 ಸಹಾಯಕ ಕಾರ್ಯದರ್ಶಿಗಳು, 07 ಕಾರ್ಮಿಕ ಅಧಿಕಾರಿಗಳು ಹಾಗೂ 07 ಹಿರಿಯ ಕಾರ್ಮಿಕ ನಿರೀಕ್ಷಕರುಗಳ ಹುದ್ದೆಗಳು ಇರುತ್ತವೆ. ಈ ಹುದ್ದೆಗಳನ್ನು ಕಾರ್ಮಿಕ ಇಲಾಖೆಯಿಂದ ನಿಯೋಜನೆಯ ಮೇಲೆ ಭರ್ತಿ ಮಾಡಲಾಗುತ್ತಿದ್ದು, ಪ್ರಸ್ತುತ 07 ಕಾರ್ಮಿಕ ಅಧಿಕಾರಿಗಳ ಹುದ್ದೆಗಳು ಹಾಗೂ 04 ಹಿರಿಯ ಕಾರ್ಮಿಕ ನಿರೀಕ್ಷಕರುಗಳ ಹುದ್ದೆಗಳು ಭರ್ತಿಯಾಗಿರುತ್ತವೆ. ಮಂಡಳಿಯಲ್ಲಿ ಖಾಲಿ ಇರುವ 02 ಉಪ ಕಾರ್ಮಿಕ ಆಯುಕ್ತರು ಹಾಗೂ 03 ಸಹಾಯಕ ಕಾರ್ಮಿಕ ಆಯುಕ್ತರ ಹುದ್ದೆಗಳ ಸಹಿತ ಮಂಡಳಿಯ ಎಲ್ಲಾ ಹುದ್ದೆಗಳು ಭರ್ತಿಯಾದಲ್ಲಿ ಅಧಿಕಾರಿಗಳಿಗೆ ಪ್ರತ್ಯೇಕ ಕೊಠಡಿಗಳನ್ನು ಒದಗಿಸಲು ಸ್ಥಳಾವಕಾಶದ ಕೊರತೆ ಉಂಟಾಗುತ್ತದೆ. ಆದುದರಿಂದ, ಮಂಡಳಿಯ ಎರಡನೇ ಮಹಡಿಯಲ್ಲಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಕೊಠಡಿಯ ಎದುರಗಡೆ ಖಾಲಿ ಸ್ಥಳದಲ್ಲಿ ಹಿರಿಯ ಕಾರ್ಮಿಕ ನಿರೀಕ್ಷಕರುಗಳಿಗೆ ಕ್ಯೂಬಿಕಲ್ ಮಾದರಿಯ ಪಾರ್ಟಿಷನ್ ಅನ್ನು ನಿರ್ಮಿಸಲು ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಮಂಡಳಿಯ ಎರಡನೇ ಮಹಡಿಯಲ್ಲಿ ಕಾರ್ಮಿಕ ಅಧಿಕಾರಿಗಳಿಗೆ ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರುಗಳಿಗೆ ಪ್ರತ್ಯೇಕವಾದ ಸ್ಥಳಾವಕಾಶ ಒದಗಿಸಲು ಕಂಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಲು ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-18

**ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ನಿಯಮ, 2006 ರ ನಿಯಮಗಳಿಗೆ ತಿದ್ದುಪಡಿ ತರಲು ಪ್ರಸ್ತಾಪಿಸಿರುವ ನಿಯಮಗಳನ್ನು ಅನುಮೋದಿಸುವ ಕುರಿತು**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ನಿಯಮ, 2006 ರ ನಿಯಮಗಳಿಗೆ ಈ ಕೆಳಕಂಡಂತೆ ತಿದ್ದುಪಡಿಯನ್ನು ತರಲು ಉದ್ದೇಶಿಸಲಾಗಿದ್ದು, ಸದರಿ ತಿದ್ದುಪಡಿಗಳಿಗೆ ಮಂಡಳಿಯ ಅನುಮೋದನೆಯನ್ನು ಕೋರಲಾಯಿತು.

| ಕ್ರ. ಸಂ. | ನಿಯಮ | ಪ್ರಸ್ತುತ ಇರುವ ನಿಯಮ | ಪ್ರಸ್ತಾಪಿಸಿರುವ ತಿದ್ದುಪಡಿ |
|---|---|---|---|
| 1 | 20 (2) (A) | ಫಲಾನುಭವಿಯು ಅರ್ಜಿಯೊಂದಿಗೆ ರೂ. 25/- ಗಳ ನೋಂದಣಿ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ. | ಈ ನಿಯಮವನ್ನು ಕೈಬಿಡಲಾಗಿದೆ. |
| 2 | 20 | ನಿಯಮ 20 (7) (8) ಅನ್ನು ಹೊಸದಾಗಿ ಸೇರಿಸಲಾಗಿದೆ. | ತಪ್ಪು ಅಥವಾ ಸುಳ್ಳು ಮಾಹಿತಿಯನ್ನು ನೀಡಿ ಹೆಸರು ನೋಂದಾಯಿಸಿ ನೋಂದಣಿಯನ್ನು ಪಡೆದುಕೊಂಡಿದ್ದಲ್ಲಿ ಸದರಿಯವರ ನೋಂದಣಿಯನ್ನು ರದ್ದು ಪಡಿಸಲು ನೋಂದಣಾಧಿಕಾರಿಗಳಿಗೆ ಅಧಿಕಾರವನ್ನು ನೀಡಲು ಹಾಗೂ ಇಂತಹ ಸಂದರ್ಭಗಳಲ್ಲಿ ಬಾಧಿತ ಕಾರ್ಮಿಕರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವನ್ನು ನೀಡಿ ನಿಯಮ 20 (7)(8) ಅನ್ನು ಹೊಸದಾಗಿ ಸೇರಿಸಲಾಗಿದೆ. |
| 3 | 21 (A) | ಪ್ರಸ್ತುತ ಫಲಾನುಭವಿಯು ಮೂರು ವರ್ಷಕ್ಕೆ ರೂ.150/- ಗಳ ಸದಸ್ಯತ್ವ ಶುಲ್ಕ ಅಥವಾ ಒಂದು ವರ್ಷಕ್ಕೆ ರೂ.25/- ಗಳ ಪಾವತಿಸಬೇಕಾಗಿರುತ್ತದೆ. | ಈ ನಿಯಮವನ್ನು ಕೈಬಿಡಲಾಗುತ್ತಿದೆ. |
| 4 | 31(A) (3) | ಮಂಡಳಿಯ ಕಾರ್ಯದರ್ಶಿಗಳಿಗೆ ಪ್ರಸ್ತುತ ರೂ.2.00 ಕೋಟಿಗಳ ವರೆಗೆ ಅನುಮೋದನೆಯನ್ನು ನೀಡುವ ಅಧಿಕಾರವನ್ನು ಪ್ರತ್ಯೋಜಿಸಲಾಗಿರುತ್ತದೆ. | ಹಣಕಾಸು ಇಲಾಖೆಯಿಂದ ದಿನಾಂಕ 14-05-2018 ರಂದು ಹೊರಡಿಸಿರುವ ಆದೇಶದಲ್ಲಿ ಆಡಳಿತಾತ್ಮಕ ಮಂಜೂರಾತಿ ವಿಷಯಗಳಿಗೆ ಸಂಬಂಧಿಸಿದಂತೆ ನಿಗಧಿ ಪಡಿಸಿರುವ ನಿಯೋಜಿತ ವಿತ್ತಾದಿಕಾರದ ಮಿತಿಯನ್ನು ನಿಗಧಿಪಡಿಸಿರುವ ರೂ.2.50 ಕೋಟಿ ಮೊತ್ತದಂತೆ ಕ್ರಮವಹಿಸಲು |

| | | | |
|---|---|---|---|
| | | | ತೀರ್ಮಾನಿಸಲಾಯಿತು. |
| 5 | 39 | 1. ನೋಂದಾಯಿತ ಫಲಾನುಭವಿಗಳು ಪಿಂಚಣಿಯನ್ನು ಪಡೆಯಲು ಪ್ರಸ್ತುತ 60 ವರ್ಷ ಪೂರೈಸಬೇಕಾಗಿರುತ್ತದೆ.<br>2. ನಿಯಮ 39(ಸಿ) ರನ್ವಯ ಪಿಂಚಣಿಯನ್ನು ಪಡೆಯಲು 60 ವರ್ಷದವರೆಗೆ ಸದಸ್ಯತ್ವ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.<br>3. ಪ್ರಸ್ತುತ ನಿಯಮ 39(7) ರನ್ವಯ ಪಿಂಚಣಿ ಮೊತ್ತವು ರೂ.2000/- ಗಳರುತ್ತವೆ.<br>4. ಜೀವಿತ ಪ್ರಮಾಣ ಪತ್ರವನ್ನು ಫಲಾನುಭವಿಯು ನಿಯಮ 39(8) ರನ್ವಯ ನೀಡಬೇಕಾಗಿರುತ್ತದೆ. | 1. ನೋಂದಾಯಿತ ಫಲಾನುಭವಿಗಳು ಪಿಂಚಣಿಯನ್ನು ಪಡೆಯಲು 60 ವರ್ಷ ಪೂರೈಸುವುದರೊಂದಿಗೆ ನೋಂದಾಯಿತರಾಗಿ 03 ವರ್ಷ ಪೂರೈಸಿರಬೇಕೆಂಬ ಹೊಸ ಷರತ್ತನ್ನು ಸೇರಿಸಲಾಗುತ್ತಿದೆ. ಈ ತಿದ್ದುಪಡಿಯ ಹಿನ್ನೆಲೆಯಲ್ಲಿ 39(ಬಿ) ಅನ್ನು ಕೈಬಿಡಲಾಗುತ್ತಿದೆ.<br>2. ಈ ನಿಯಮವನ್ನು ಕೈಬಿಡಲಾಗುತ್ತಿದೆ.<br>3. ಈ ಮೊತ್ತವನ್ನು ರೂ.3000/- ಕ್ಕೆ ಹೆಚ್ಚಿಸಲಾಗುತ್ತಿದೆ.<br>4. ಜೀವಿತ ಪ್ರಮಾಣ ಪತ್ರವನ್ನು ನೀಡುವ ಅಧಿಕಾರವನ್ನು ಕಂದಾಯ ಅಧಿಕಾರಿಗಳಿಗೆ ಹಾಗು ಕಾರ್ಮಿಕ ಇಲಾಖೆಯ ನಿರೀಕ್ಷಕರುಗಳಿಗೆ ಹಾಗೂ ಕಾರ್ಮಿಕ ಅಧಿಕಾರಿಗಳಿಗೆ ನೀಡಿ ನಿಯಮ 39(8) ತಿದ್ದುಪಡಿಯನ್ನು ತರಲಾಗುತ್ತಿದೆ. |
| 6 | 39(A) | ಪ್ರಸ್ತುತ ಕುಟುಂಬ ಪಿಂಚಣಿಯ ಫಲಾನುಭವಿಯು ಪಡೆಯುತ್ತಿದ್ದ ಪಿಂಚಣಿಯ ಶೇ.50 ಮೀರಬಾರದೆಂದಿರುತ್ತದೆ. | ಈ ಮೊತ್ತವನ್ನು ರೂ.2000/- ಗಳಿಗೆ ನಿಗಧಿ ಪಡಿಸಿ ನಿಯಮ 39(ಎ) ಅನ್ನು ತಿದ್ದುಪಡಿ ಮಾಡಲಾಗುತ್ತಿದೆ. |
| 7 | 40 | 40(ಸಿ) ರನ್ವಯ ಫಲಾನುಭವಿಯ ಸದಸ್ಯತ್ವ ಶುಲ್ಕವು ಬಾಕಿ ಇದ್ದಲ್ಲಿ ಸೌಲಭ್ಯವನ್ನು ಪಡೆಯಲು ಅರ್ಹನಿರುವುದಿಲ್ಲ. | ನಿಯಮ 40(ಸಿ) ಅನ್ನು ಕೈಬಿಡಲಾಗುತ್ತಿದೆ. |
| 8 | 41 | 41(À)ರನ್ವಯ ಶ್ರಮ ಸಾಮರ್ಥ್ಯ ಟೂಲ್ ಕಿಟ್ ಪಡೆಯಲು 55 ವರ್ಷದೊಳಗಿರಬೇಕು ಎಂದಿರುತ್ತದೆ. | ನಿಯಮ 41ಎ ಅನ್ನು ಕೈಬಿಡಲಾಗುತ್ತಿದೆ. ಹಾಗೂ ಮಂಡಳಿಯಿಂದ ತರಬೇತಿ ಪಡೆಯದಿದ್ದರೂ ಸಹ ನೋಂದಾಯಿತ ಕಾರ್ಮಿಕರಿಗೆ ಟೂಲ್ ಕಿಟ್ ಅನ್ನು ನೀಡಲು 41(ಇ) ಅನ್ನು ಹೊಸದಾಗಿ ಸೇರಿಸಲಾಗುತ್ತಿದೆ. |
| 9 | 42 | ಪ್ರಸ್ತುತ ನಿಯಮ 42(1) ರಲ್ಲಿ | ಈ ನಿಯಮವನ್ನು ಮಾರ್ಪಡಿಸಿ ಎಲ್ಲಾ |

| | | | |
|---|---|---|---|
| | | ಫಲಾನುಭವಿಯು 45 ವರ್ಷದವರಾಗಿದ್ದು 15 ವರ್ಷಗಳ ಸೇವೆಯಿದ್ದಲ್ಲಿ ಮಾತ್ರ ಕಾರ್ಮಿಕ ಗೃಹ ಭಾಗ್ಯ ಯೋಜನೆಯನ್ನು ಪಡೆಯಲು ಅರ್ಹರಿರುತ್ತಾರೆ.<br><br>ಪ್ರಸ್ತುತ ನಿಯಮ 42(3) ಗಳನ್ವಯ ಫಲಾನುಭವಿಗಳಿಗೆ ನೀಡಿರುವ ಸಾಲವನ್ನು 20 ಸಮಾನ ಕಂತುಗಳಲ್ಲಿ ವಸೂಲು ಮಾಡಲು ಅವಕಾಶವಿರುತ್ತದೆ. | ನೊಂದಾಯಿತ ಕಟ್ಟಡ ಕಾರ್ಮಿಕರಿಗೆ ಈ ಸೌಲಭ್ಯವನ್ನು ಪಡೆಯಲು ಅವಕಾಶ ಕಲ್ಪಿಸಲಾಗುತ್ತಿದೆ.<br><br>ವಸೂಲಾತಿ ಕ್ರಮವನ್ನು ಮಂಡಳಿಯ ನಿರ್ಣಯದನ್ವಯ ಎಂದು ನಿಯಮಗಳಲ್ಲಿ ಮಾರ್ಪಡು ಮಾಡಲಾಗುತ್ತಿದೆ. |
| 10 | 43 | ಪ್ರಸ್ತುತ 43(1) ರನ್ವಯ ಹೆಣ್ಣು ಮಗುವಿನ ಜನನಕ್ಕೆ ರೂ.30,000/- ಹಾಗೂ ಗಂಡು ಮಗುವಿನ ಜನನಕ್ಕೆ ರೂ.20,000/- ಗಳ ಹೆರಿಗೆ ಸಹಾಯಧನವನ್ನು ನಿಯಮ 43(1) ರನ್ವಯ ನೀಡಲಾಗುತ್ತಿದೆ. | ಈ ಮೊತ್ತವನ್ನು ಸಮನಾಗಿ ಪ್ರತಿ 2 ಹೆರಿಗೆಗೆ ರೂ.50,000/-ಗಳಿಗೆ ಹೆಚ್ಚಿಸಲಾಗುತ್ತಿದೆ. |
| 11 | 44 | ಪ್ರಸ್ತುತ 44(1) ರನ್ವಯ ರೂ.50,000/- ಗಳ ಅನುಗ್ರಹರಾಶಿಯನ್ನು ನೀಡಲಾಗುತ್ತಿದೆ. | ಈ ಮೊತ್ತವನ್ನು ರೂ.71,000/- ಹೆಚ್ಚಿಸಿ ನಿಯಮ 44(1) ಕ್ಕೆ ತಿದ್ದುಪಡಿ ಮಾಡಲಾಗುತ್ತಿದೆ. ಇದಲ್ಲದೆ ಕೋವಿಡ್ ನಿಂದ ಮೃತ ಪಟ್ಟ ನೋಂದಾಯಿತ ಫಲಾನುಭವಿಯ ವಾರಸುದಾರರಿಗೆ ರೂ.71,000/- ಗಳ ಬದಲಾಗಿ ರೂ.2.00 ಲಕ್ಷವನ್ನು ನೀಡಲು ಅವಕಾಶ ಕಲ್ಪಿಸಿ ಹೊಸ ಪರಂತುಕವನ್ನು ಸೇರಿಸಲಾಗುತ್ತಿದೆ. |
| 12 | 45 | ನಿಯಮ 45(ಸಿ) ರಲ್ಲಿ ಫಲಾನುಭವಿಯ ಸದಸ್ಯತ್ವ ಶುಲ್ಕವು ಬಾಕಿ ಇದ್ದಲ್ಲಿ ಸೌಲಭ್ಯವನ್ನು ಪಡೆಯಲು ಅರ್ಹನಿರುವುದಿಲ್ಲ ಎಂದು ಇರುತ್ತದೆ. | ಈ ನಿಯಮವನ್ನು ಕೈಬಿಡಲಾಗುತ್ತಿದೆ.<br><br>ಹೊಸದಾಗಿ ಉಪನಿಯಮ 45(5) ಅನ್ನು ಸೇರಿಸಲಾಗುತ್ತಿದ್ದು ಇದರನ್ವಯ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಲೋಕಸೇವಾ ಆಯೋಗದ ಪರೀಕ್ಷೆಗಳಿಗೆ ತರಬೇತಿ ನೀಡಲು ಹಾಗೂ 45(6) ರನ್ವಯ ನೋಂದಾಯಿತ ಕಾರ್ಮಿಕರ ಮಕ್ಕಳಿಗೆ Essential Learning Kit, computer, Laptop ಹಾಗೂ ಇತರೆ ಕಲಿಕಾ |

| | | | |
|---|---|---|---|
| | | | ಸಾಮಗ್ರಿಗಳನ್ನು ನೀಡಲು ಅವಕಾಶವನ್ನು ಕಲ್ಪಿಸಲಾಗುತ್ತಿದೆ. ಹಾಗೂ 45(7) ರನ್ವಯ ಶೈಕ್ಷಣಿಕ ಧನಸಹಾಯವನ್ನು ಎಸ್‌ಎಸ್‌ಪಿ ಪೋರ್ಟಲ್ ಮೂಲಕ ನೀಡಲು ಅವಕಾಶ ಕಲ್ಪಿಸಲಾಗುತ್ತಿದೆ. |
| 13 | 46 | ಪ್ರಸ್ತುತ 46 ರಲ್ಲಿ ವೈದ್ಯಕೀಯ ಸಹಾಯಧನಕ್ಕೆ ರೂ.10,000/- ಗಳ ಮಿತಿಯನ್ನು ನಿಗದಿಪಡಿಸಲಾಗಿರುತ್ತದೆ. | ಈ ಮೊತ್ತವನ್ನು 20,000/- ಗಳಿಗೆ ಹೆಚ್ಚಿಸಲಾಗುತ್ತಿದೆ. |
| 14 | -- | -- | ಹೊಸದಾಗಿ ನಿಯಮ 46(ಎ) ಅನ್ನು ಸೇರಿಸಲಾಗುತ್ತಿದ್ದು, ಸದರಿ ನಿಯದನ್ವಯ ಮೊಬೈಲ್ ಕ್ಲಿನಿಕ್ ಅನ್ನು ಸ್ಥಾಪಿಸಲು ಅವಕಾಶ ಕಲ್ಪಿಸಲಾಗುತ್ತಿದೆ. |
| 15 | -- | -- | ಹೊಸದಾಗಿ ನಿಯಮ 46(ಬಿ) ಅನ್ನು ಸೇರಿಸಲಾಗುತ್ತಿದ್ದು, ಸದರಿ ನಿಯದನ್ವಯ ನ್ಯೂಟ್ರಿಷನ್ ಕಿಟ್ ಅನ್ನು ನೀಡಲು ಅವಕಾಶ ಕಲ್ಪಿಸಲಾಗುತ್ತಿದೆ. |
| 16 | 47 | ಪ್ರಸ್ತುತ ನಿಯಮ 47(2) ರನ್ವಯ ಕಟ್ಟಡ ಕಾರ್ಮಿಕರು ಕೆಲಸದ ಸ್ಥಳದಲ್ಲಿ ಕೆಲಸದಿಂದಾದ ಅಪಘಾತದಲ್ಲಿ ಮೃತಪಟ್ಟಲ್ಲಿ ಪರಿಹಾರವನ್ನು ಪಡೆಯಲು ಅರ್ಹರಿರುವುದಿಲ್ಲ. | ಈ ನಿಯಮವನ್ನು ಬದಲಾಯಿಸಿ ಕಟ್ಟಡ ಕಾರ್ಮಿಕರು ಕೆಲಸದ ಸ್ಥಳದಲ್ಲಿ ಕೆಲಸದಿಂದಾದ ಅಪಘಾತದಲ್ಲಿ ಮೃತಪಟ್ಟಲ್ಲಿ ಪರಿಹಾರವನ್ನು ಪಡೆಯಲು ಅವಕಾಶವನ್ನು ನೀಡಲಾಗುತ್ತಿದೆ. ಹಾಗೂ ತತ್ಪರಿಣಾಮವಾಗಿ ನಿಯಮ 47(5) (i) & (ii) ಕೈಬಿಡಲಾಗುತ್ತಿದೆ. |
| 17 | 49 | ಪ್ರಸ್ತುತ ನಿಯಮ 49 ರಲ್ಲಿ ರೂ.50,000/- ಗಳ ಮದುವೆ ಧನಸಹಾಯವನ್ನು ನೀಡಲಾಗುತ್ತಿದೆ. | ಸದರಿ ಮೊತ್ತವನ್ನು ತಿದ್ದುಪಡಿಯ ಮೂಲಕ ರೂ.60,000/- ಗಳಿಗೆ ಹೆಚ್ಚಿಸಲಾಗುತ್ತಿದೆ. |
| 18 | 49(B) | -- | ಹೊಸದಾಗಿ ನಿಯಮ 49(ಬಿ) ಗೆ ಪರಂತುಕವನ್ನು ಸೇರಿಸಲಾಗಿದ್ದು ಫಲಾನುಭವಿಗಳ ಕ್ಲೈಂ ಅರ್ಜಿಗಳು ತಿರಸ್ಕೃತಗೊಂಡಲ್ಲಿ ಉಪ ಕಾರ್ಮಿಕ ಆಯುಕ್ತರು ಹಾಗೂ ಸಹಾಯಕ ಕಾರ್ಮಿಕ ಆಯುಕ್ತರಿಗೆ ಮೇಲ್ಮನವಿ ಅಧಿಕಾರವನ್ನು ನೀಡಲಾಗುತ್ತಿದೆ. |
| 19 | 49(D) | ಈ ನಿಯಮದಲ್ಲಿ ನೋಂದಾಯಿತ ಕಾರ್ಮಿಕರಿಗೆ ಎಲ್‌ಪಿಜಿ ಸೌಲಭ್ಯವನ್ನು ನೀಡಲಾಗುತ್ತಿತ್ತು. | ಈ ನಿಯಮವನ್ನು ಕೈಬಿಡಲಾಗಿದೆ. |
| 20 | 49(C)(F) | 49 (c) &(f) ರ ಉಪ ನಿಯಮ 2 ರಲ್ಲಿ | ಈ ಉಪ ನಿಯಮವನ್ನು ಕೈಬಿಡಲಾಗುತ್ತಿದೆ. |

| | | | |
|---|---|---|---|
| | | ಫಲಾನುಭವಿಯ ಸದಸ್ಯತ್ವ ಶುಲ್ಕವು ಬಾಕಿ ಇದ್ದಲ್ಲಿ ಸೌಲಭ್ಯವನ್ನು ಪಡೆಯಲು ಅರ್ಹನಿರುವುದಿಲ್ಲ ಎಂದಿರುತ್ತದೆ. | |
| 21 | -- | -- | 49(ಜಿ) ಅನ್ನು ಹೊಸದಾಗಿ ಸೇರಿಸಿ ಕೆ.ಎಸ್.ಆರ್.ಟಿ.ಸಿ/ಎನ್.ಡಬ್ಲ್ಯೂ. ಕೆ.ಎಸ್.ಆರ್.ಟಿ.ಸಿ/ಎನ್.ಇ.ಕೆ.ಎಸ್.ಆರ್.ಟಿ.ಸಿ, ಬಸ್‌ಗಳಲ್ಲಿ ಪ್ರಯಾಣಿಸುವ ಕಟ್ಟಡ ಕಾರ್ಮಿಕರಿಗೆ ಉಚಿತ ಪಾಸ್ ನೀಡಲು ಅವಕಾಶ ಕಲ್ಪಿಸಲಾಗುತ್ತಿದೆ. |
| 22 | 43(2)(F) | – | ತಾಯಿ ಮಗು ಸಹಾಯ ಹಸ್ತ ಎಫ್‌ಡಿ ಅಥವಾ ಬಾಂಡ್‌ಗಳ ಬದಲಾಗಿ ಹಣವನ್ನು ನೇರವಾಗಿ ತಾಯಿಯ ಖಾತೆಗೆ ವರ್ಗಾಯಿಸುವುದು. |

ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಮೇಲಿನ ನಿಯಮಗಳಿಗೆ ತಿದ್ದುಪಡಿ ತರಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು. ನಿಯಮ 43 ರಲ್ಲಿ ಹೆರಿಗೆ ಸಹಾಯಧನದ ಮೊತ್ತವನ್ನು ಗಂಡು ಮತ್ತು ಹೆಣ್ಣು ಮಗುವಿಗೆ ಸಮಾನ ಮೊತ್ತದ ಸಹಾಯಧನ ನೀಡಲು ಚರ್ಚಿಸಿ ನಿರ್ಣಯಿಸಲಾಯಿತು. ಮದುವೆ ಸಹಾಯಧನ ಮೊತ್ತವನ್ನು ಫಲಾನುಭವಿಯ ಬ್ಯಾಂಕ್ ಖಾತಗೆ ವರ್ಗಾಯಿಸಬೇಕೆಂದು ಸಭೆಯ ಸದಸ್ಯರು ಕೋರಿದ್ದು, ಈ ಮೇರೆಗೆ ಸನ್ಮಾನ್ಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಫಲಾನುಭವಿಯ ಖಾತೆಗೆ ಮದುವೆ ಸಹಾಯಧನವನ್ನು ಪಾವತಿಸಲು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ ಮದುವೆ ಸಹಾಯಧನದ ಮೊತ್ತವನ್ನು ಫಲಾನುಭವಿಯ ಖಾತೆಗೆ ವರ್ಗಾಯಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

## ಮಾನ್ಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ಇತರೆ ವಿಷಯಗಳ ಚರ್ಚೆ

### ವಿಷಯ ಸಂಖ್ಯೆ-19

**ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕ ಇಲಾಖೆಯ ಕಛೇರಿಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ಹಿತದೃಷ್ಟಿಯಿಂದ ಸ್ವಚ್ಛತಾ ಕಾರ್ಯಕ್ಕಾಗಿ/ ಭದ್ರತೆಗಾಗಿ ಸಿಬ್ಬಂದಿಗಳನ್ನು ನಿಯೋಜಿಸಲು ಅನುಮೋದನೆಯನ್ನು ಪಡೆಯುವ ಕುರಿತು.**

ಮಂಡಳಿಯಿಂದ ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಕಾರ್ಮಿಕ ಅಧಿಕಾರಿಗಳಿಗೆ ತಲಾ ಒಬ್ಬರು ಕಾರ್ಯನಿರ್ವಾಹಕ ಹಾಗೂ ಡಾಟಾ ಎಂಟ್ರಿ ಆಪರೇಟರ್‌ನ್ನು ಒದಗಿಸಲಾಗಿರುತ್ತದೆ ಇದಲ್ಲದೇ ಉಪ ಕಾರ್ಮಿಕ ಆಯುಕ್ತರು ಹಾಗೂ ಕಾರ್ಮಿಕ ನಿರೀಕ್ಷಕರ ಕಚೇರಿಗಳಿಗೆ ಒಬ್ಬರು ಡಾಟಾ ಎಂಟ್ರಿ ಆಪರೇಟರ್‌ನ್ನು ಕೂಡಾ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲಾಗಿರುತ್ತದೆ. ಸದರಿ ಸಿಬಂದಿಗಳು ಕಾರ್ಮಿಕ ಇಲಾಖೆಯ ಕಛೇರಿಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕಾರ್ಮಿಕ ಇಲಾಖೆಯ

ಕಛೇರಿಗಳಗೆ ವಿವಿಧ ಕಾರಣಗಳ ಗಾಗಿ ದಿನಂಪ್ರತಿ ನೂರಾರು ಕಟ್ಟಡ ಕಾರ್ಮಿಕರು ಬಂದು ಹೋಗುತ್ತಾರೆ. ಹುಬ್ಬಳ್ಳಿ ಹಾಗೂ ಬೆಳಗಾವಿಯಲ್ಲಿ ಕಾರ್ಮಿಕ ಇಲಾಖೆಗೆ ಸ್ವಂತ ಕಟ್ಟಡಗಳಿದ್ದು ಸದರಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರ ಕೋರಿಕೆಯನ್ವಯ ಕಛೇರಿಯ ಸ್ವಚ್ಛತೆಯನ್ನು ಕಾಪಾಡುವ ಉದ್ದೇಶದಿಂದ ಹಾಗೂ ಮಂಡಳಿಯ ಕಡತಗಳು ಮತ್ತು ಪರಿಕರಗಳ ರಕ್ಷಣೆಗಾಗಿ ತಲಾ ಒಬ್ಬರು ಕಾವಲುಗಾರರು ಹಾಗೂ ಸ್ವಚ್ಛತಾಗಾರರನ್ನು ಒದಗಿಸಲಾಗಿರುತ್ತದೆ. ಈ ಉದ್ದೇಶಕ್ಕಾಗಿ ಎರಡು ಕಛೇರಿಗಳಗೆ ಸೇರಿ ಮಂಡಳಿಗೆ ವಾರ್ಷಿಕ ರೂ.10.50 ಲಕ್ಷ ರೂಪಾಯಿ ವೆಚ್ಚವಾಗುತ್ತದೆ. ಈ ಮೊತ್ತವನ್ನು ಮಂಡಳಿಯ ಆಡಳಿತಾತ್ಮಕ ವೆಚ್ಚದಿಂದ ಭರಿಸಲು ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-20

**ಕಲಬುರಗಿ ಜಿಲ್ಲೆಯ ನಂದೂರು ಕೆಸರಟಗಿ ಕೈಗಾರಿಕಾ ಪ್ರದೇಶದಲ್ಲಿ ಕಟ್ಟಡ ಕಾರ್ಮಿಕರಿಗಾಗಿ ಟ್ರಾನ್ಸಿಟ್ ಅಕಮಾಡೇಷನ್ (Transit Accomodation) ನಿರ್ಮಾಣಕ್ಕಾಗಿ ಕೆಐಎಡಿಬಿ ವತಿಯಿಂದ ಮಂಡಳಿಗೆ ಹಂಚಿಕೆ ಮಾಡಿರುವ 10 ಎಕರೆ ಜಮೀನಿಗೆ ಪರಿಷ್ಕೃತ ದರದಂತೆ ಬಾಕಿ ಭೂ ಬೆಲೆ ರೂ.1,84,50,000/-ಗಳನ್ನು ಮಂಡಳಿಯಿಂದ ಕೆಐಎಡಿಬಿಗೆ ಪಾವತಿಸಲು ಅನುಮೋದನೆಯನ್ನು ಪಡೆಯುವ ಕುರಿತು.**

ಕೇಂದ್ರ ಸರ್ಕಾರದ Ministry of Labour & Employment ನಿರ್ದೇಶನದಂತೆ ಕಟ್ಟಡ ಕಾರ್ಮಿಕರಿಗೆ ಟ್ರಾನ್ಸಿಟ್ ಅಕಮಾಡೇಷನ್ (Transit Accomodation) /Labour shed cum night shelter, mobile toilet and mobile creche facilities ಗಳನ್ನು ನಿರ್ಮಾಣ ಮಾಡಲು ಅನುಮತಿಸಿರುತ್ತದೆ. ಅದರಂತೆ ಕಲಬುರಗಿ ಜಿಲ್ಲೆಯ ನಂದೂರು ಕೆಸರಟಗಿ ಕೈಗಾರಿಕಾ ಪ್ರದೇಶದ ಪ್ಲಾಟ್ ನಂ 1,2,3 & 94ರಲ್ಲಿ 10 ಎಕರೆ ಜಮೀನು ಮಂಡಳಿಗೆ ದಿನಾಂಕ:14-01-2022ರಂದು ಪ್ರತಿ ಎಕರೆಗೆ ರೂ.51,50,000/-ಗಳಂತೆ ಹಂಚಿಕೆಯಾಗಿದ್ದು, ಈಗಾಗಲೇ ಕೆಐಎಡಿಬಿಯ ದಿನಾಂಕ:26-10-2013 ರ ಪತ್ರದ ಮೇರೆಗೆ ಪ್ರತಿ ಎಕರೆಗೆ ರೂ.33,05,000/- ಗಳಂತೆ ಚೆಕ್ ಸಂಖ್ಯೆ:041549 ದಿನಾಂಕ:12-11-2013 ರಲ್ಲಿ ರೂ.3,30,50,000/-ಗಳನ್ನು ಪಾವತಿಸಲಾಗಿರುತ್ತದೆ.

ಆದ್ದರಿಂದ, ಹಂಚಿಕೆ ಪತ್ರದ ಪ್ರಕಾರ ಪ್ರಸ್ತುತ ಪರಿಷ್ಕೃತ ಭೂ ಬೆಲೆ ಎಕರೆಗೆ ರೂ.51,50,000/-ರಂತೆ ಬಾಕಿ ಮೊತ್ತ ರೂ.1,84,50,000/- (ಒಂದು ಕೋಟಿ ಎಂಭತ್ನಾಲ್ಕು ಲಕ್ಷದ ಐವತ್ತು ಸಾವಿರ) ಗಳನ್ನು ಕೆಐಎಡಿಬಿಯ CEO/DO ಗೆ ಪಾವತಿಸಬೇಕಾಗಿದ್ದು, ಈ ಮೊತ್ತವನ್ನು ಮಂಡಳಿಯಿಂದ ಪಾವತಿಸಲು ಅನುಮೋದನೆ ಕೋರಿದರು.

ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ನಂದೂರು ಕೆಸರಟಗಿಯಲ್ಲಿ ಹಂಚಿಕೆಯಾಗಿರುವ ಜಮೀನಿಗೆ ಬಾಕಿ ಭೂ ಬೆಲೆಯನ್ನು ಮಂಡಳಿಯು ಕೆಐಎಡಿಬಿ ಗೆ ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆಗಾಗಿ ಅಂಗೀಕರಿಸಿತು.**

ಕಟ್ಟಡ ಕಾರ್ಮಿಕರಿಗಾಗಿ **Transit Accomodation** ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ನಿರ್ಮಾಣ ಮಾಡುವ ಸಲುವಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರೊಂದಿಗೆ ದಿನಾಂಕ 09-11-2021 ರ ಸಭೆಯಲ್ಲಿ ಚರ್ಚಿಸಿ ಕೆಐಎಡಿಬಿ ಯಿಂದ ನಿವೇಶನವು ಲಭ್ಯವಿರುವ ಜಿಲ್ಲೆಗಳಾದ ಮಂಗಳೂರು, ವಿಜಯಪುರ, ದಾವಣಗೆರೆ, ಬಳ್ಳಾರಿ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ, ರಾಮನಗರ ಮತ್ತು ಬೀದರ್ ನಲ್ಲಿ ಮಂಡಳಿಗೆ 05 ರಿಂದ 10 ಎಕರೆ ನಿವೇಶವನ್ನು ಮಂಜೂರು ಮಾಡುವಂತೆ ಕೋರಲಾಗಿದೆ ಎಂದು ಸಭೆಗೆ ತಿಳಿಸಿದರು.

## ವಿಷಯ ಸಂಖ್ಯೆ-21

**ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಣಿ ಮತ್ತು ನವೀಕರಣದ ಕೆಲಸಗಳು ಹೆಚ್ಚಿರುವ ಜಿಲ್ಲೆಗಳು, ಏಳಕ್ಕಿಂತ ಹೆಚ್ಚು ತಾಲ್ಲೂಕುಗಳನ್ನು ಹೊಂದಿರುವ ಜಿಲ್ಲೆಗಳಲ್ಲಿ ಕಾರ್ಮಿಕ ಅಧಿಕಾರಿಗಳ ಕಛೇರಿಗಳಿಗೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಅವಶ್ಯಕತೆಗೆ ಅನುಗುಣವಾಗಿ ಮಂಡಳಿಯ ವತಿಯಿಂದ ಒದಗಿಸಲು ಅನುಮೋದನೆ ನೀಡುವ ಕುರಿತು**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಣಿ ಮತ್ತು ನವೀಕರಣದ ಕೆಲಸಗಳು ಹೆಚ್ಚಿರುವ ಜಿಲ್ಲೆಗಳು, ಏಳಕ್ಕಿಂತ ಹೆಚ್ಚು ತಾಲ್ಲೂಕುಗಳನ್ನು ಹೊಂದಿರುವ ಜಿಲ್ಲೆಗಳಲ್ಲಿ ಕೆಲಸದ ಒತ್ತಡವು ಹೆಚ್ಚಿದ್ದಲ್ಲಿ ಹಾಗೂ ಮಹಾನಗರ ಪಾಲಿಕೆಗಳನ್ನು ಒಳಗೊಂಡ ಜಿಲ್ಲೆಗಳಲ್ಲಿ ಹೆಚ್ಚುವರಿಯಾಗಿ ಅವಶ್ಯಕತೆಗೆ ಅನುಗುಣವಾಗಿ ಕಾರ್ಮಿಕ ಅಧಿಕಾರಿಗಳ ಕಛೇರಿಗಳಿಗೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಮಂಡಳಿಯ ವತಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಲು ಮಂಡಳಿಯ ಅನುಮೋದನೆಗೆ ಮಂಡಿಸಿದೆ.

ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಳಿಯ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.**

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

- ರಾಜ್ಯದಲ್ಲಿ ಹೊಸದಾಗಿ ಕಟ್ಟಡ ಕಾರ್ಮಿಕರನ್ನು ನೋಂದಾಯಿಸಲು ಸಾಧ್ಯವಾಗುತ್ತಿಲ್ಲ ಹಾಗೂ ಬೆಂಗಳೂರಿನ ಮೆಟ್ರೋ ಕಾಮಗಾರಿಯಲ್ಲಿ ಕಟ್ಟಡ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ನೋಂದಣಿ ಮಾಡಲು ಅವಕಾಶ ಕಲ್ಪಿಸಬೇಕೆಂದು ಮಂಡಳಿಯ ಸದಸ್ಯರುಗಳು ತಿಳಿಸಿದರು. ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ರಾಜ್ಯದಲ್ಲಿ ಇದುವರೆಗೆ ಸುಮಾರು ನಕಲಿ ಗುರುತಿನ ಚೀಟಿ ಪಡೆದು ಮಂಡಳಿಯ ವಿವಿಧ ಸೌಲಭ್ಯಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತಿರುವುದು ಕಂಡು ಬಂದಿರುತ್ತದೆ. ಈ ನಕಲಿ ಗುರುತಿನ ಚೀಟಿಗಳನ್ನು ರದ್ದುಗೊಳಿಸಲು ಸದರಿ ವಿಷಯವನ್ನು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರ ಗಮನಕ್ಕೆ ತಂದು ತುರ್ತಾಗಿ ವಿಶೇಷವಾದ ವಿಜಿಲೆನ್ಸ್ ತಂಡವನ್ನು ರಚನೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರು ಸಭೆಗೆ ಸೂಚಿಸಿದರು.
- ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಅಧ್ಯಕ್ಷರಾದ ಅಬ್ದುಲ್ ಸತ್ತಾರ್ ರವರು ಮಾತನಾಡುತ್ತಾ ಬಿಲ್ಡರ್ ಅಸೋಸಿಯೇಷನ್ ವತಿಯಿಂದ ಹೊಸದಾಗಿ ನೋಂದಣಿ ಮಾಡುವ ಸಂದರ್ಭದಲ್ಲಿ ಉದ್ಯೋಗ ಪ್ರಮಾಣ ಪತ್ರ ನೀಡುವ ಅವಕಾಶವನ್ನು ಕಲ್ಪಿಸಬೇಕೆಂದು ತಿಳಿಸಿದರು ಹಾಗೂ ಇದುವರೆಗೂ ಸುಮಾರು ಮೂರು ವರ್ಷಗಳ ಕಾಲ ಕಟ್ಟಡ ಕಾರ್ಮಿಕರಿಗೆ ಕೌಶಲ್ಯ ತರಬೇತಿಯನ್ನು ಹಮ್ಮಿಕೊಂಡಿದ್ದು ಇದಕ್ಕೆ ತಗಲುವ ಖರ್ಚು ವೆಚ್ಚಗಳನ್ನು ಮಂಡಳಿಯಿಂದ

ಭರಿಸಬೇಕೆಂದು. ಈಗಾಗಲೇ ಎರಡು ಬಾರಿ ಮನವಿಯನ್ನು ಮಂಡಳಿಗೆ ಸಲ್ಲಿಸಿದೆ ಎಂದು ತಿಳಿಸಿದರು ಸನ್ಮಾನ್ಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಟೆಂಡರ್ ಕರೆಯಲು ಸೂಚಿಸಿದರು ಹಾಗೂ ಸದರಿ ಸಂಸ್ಥೆಯವರು ಟೆಂಡರ್ ನಲ್ಲಿ ಭಾಗವಹಿಸಲು ಸೂಚಿಸಿದರು.

- ಮಂಡಳಿಯ ಸೌಲಭ್ಯಗಳನ್ನು ಪಡೆಯುವುದನ್ನು ಮುಂದುವರೆಸುವ ಸಲುವಾಗಿ ಪ್ರತಿ ವರ್ಷ ಜೀವಂತ ಪ್ರಮಾಣಪತ್ರವನ್ನು ನೀಡುವ ಅಧಿಕಾರವನ್ನು ಕೇಂದ್ರ ಸರ್ಕಾರದ ಕಾರ್ಮಿಕ ನಿರೀಕ್ಷಕಕರು/ ತನಿಖಾಧಿಕಾರಿಗಳಿಗೂ ಸಹಾ ವಿಸ್ತರಿಸಬೇಕೆಂದು ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಕಾರ್ಮಿಕ ಕಲ್ಯಾಣ ಸಂಸ್ಥೆ, ಬೆಂಗಳೂರು ಪರವಾಗಿ ಹಾಜರಿದ್ದ ಶ್ರೀ ರಾಮದುರ್ಗಾಪ್ರಸಾದ್ ಇವರು ಸಲಹೆ ನೀಡಿದರು.
- ಮಂಡಳಿಯು ತನ್ನದೇ ಆದ ಹೊಸ ತಂತ್ರಾಂಶವೊಂದನ್ನು ಅಭಿವೃದ್ಧಿ ಪಡಿಸುತ್ತಿದ್ದು, ಅದು ಪೂರ್ಣವಾಗಿ ಚಾಲನೆಗೊಂಡಲ್ಲಿ ಕಟ್ಟಡ ಕಾರ್ಮಿಕರ ವಿವಿಧ ಅರ್ಜಿಗಳ ವಿಲೇವಾರಿಯಲ್ಲಿ ಪರಿಣಾಮಕಾರಿಯಾದ ಪ್ರಗತಿ ಸಾಧ್ಯ ಆಗುವುದೆಂದು ಆಶಿಸಿದೆ ಎಂದು ಸನ್ಮಾನ್ಯ ಕಾರ್ಮಿಕ ಸಚಿವರು ಸಭೆಗೆ ತಿಳಿಸಿಸುತ್ತಾ, ಇದು ಚಾಲನೆಗೊಂಡಲ್ಲಿ ದೇಶದಲ್ಲಿಯೇ ಈ ರೀತಿ ಮಂಡಳಿಯೇ ಸ್ವಂತ ತಂತ್ರಾಂಶವನ್ನು ಹೊಂದಿರುವ ನಮ್ಮ ಕರ್ನಾಟಕ ರಾಜ್ಯದ ಪ್ರಥಮ ಮಂಡಳಿ ಆಗುವುದೆಂದು ಸಂತಸ ವ್ಯಕ್ತ ಪಡಿಸಿದರು.
- 2016-17ನೇ ಸಾಲಿನ ಮಂಡಳಿಯ ಸ್ವೀಕೃತಿ ಮತ್ತು ವೆಚ್ಚ ಲೆಕ್ಕಪತ್ರಗಳನ್ನು ಅನುಮೋದನೆ ಕೋರಿ ಕಾರ್ಯದರ್ಶಿಯವರು ಸಭೆಯ ಮುಂದೆ ಮಂಡಿಸಿದರು. ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.
- ಮಂಡಳಿಯ ಕಾರ್ಯಚಟುವಟಿಕೆಗಳು ಹೆಚ್ಚಾಗಿದ್ದು ಹೊರಗುತ್ತಿಗೆ ಸಿಬ್ಬಂದಿಗಳಾದ ಎಕ್ಸಿಕ್ಯೂಟಿವ್ ಮತ್ತು ಡಿ.ಇ.ಓ ಗಳ ಮುಖಾಂತರ ಕಾರ್ಯನಿರ್ವಹಿಸುತ್ತಿರುವುದರಿಂದ ಇವರುಗಳು ಸರಿಯಾಗಿ ಕಾರ್ಯನಿರ್ವಹಿಸದೇ ಇರುವುದರಿಂದ ಹೊಣೆಗಾರಿಕೆ ನಿಗಧಿಪಡಿಸಲು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಮಂಡಳಿಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳು ರಚನೆಯಾಗಿ ಅದರನ್ವಯ ನೇಮಕಾತಿ ಮಾಡಲು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ ಚರ್ಚಿಸಿ ರಾಜ್ಯದಲ್ಲಿರುವ ನೇಮಕಾತಿ ಪ್ರಾಧಿಕಾರಗಳಲ್ಲಿ (ಕೆ.ಪಿ.ಎಸ್.ಸಿ / ಕೆ.ಇ.ಎ) ಹೆಚ್ಚಿನ ಕೆಲಸದ ಒತ್ತಡ ಇರುವುದರಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯಗಳಿಂದ ಪ್ರಸ್ತಾವನೆ ಪಡೆದು ಸಮ್ಮತಿ ಸೂಚಿಸುವ ಸೂಕ್ತ ವಿಶ್ವವಿದ್ಯಾನಿಲಯಗಳ ಮುಖಾಂತರ ಕೈಗೊಳ್ಳಲು ಮುಂದಿನ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.
- ಕಲ್ಯಾಣ ಆಯುಕ್ತರು ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ನಿರ್ವಹಿಸುವ ಕಾಮಗಾರಿಗಳ ಕುರಿತಾಗಿ ತಾಂತ್ರಿಕ ಸಿಬ್ಬಂದಿ ವಿಭಾಗದ ಕೊರತೆಯಿರುವುದರಿಂದ ಸದರಿ ಮಂಡಳಿಗೆ ಕೆಟಿಪಿಪಿ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಕಾರ್ಮಿಕ ಕಲ್ಯಾಣ ಮಂಡಳಿಯ ತೀರ್ಮಾನದಂತೆ ಕೆಬಿಒಸಿಡಬ್ಲ್ಯೂಡಬ್ಲ್ಯೂಬಿ ಮಂಡಳಿಗೆ ಕೋರಿಕೊಂಡಿರುತ್ತಾರೆ. ಅದರಂತೆ ಸದರಿ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಸಿವಿಲ್ ಕಾಮಗಾರಿ ನಿರ್ವಹಿಸಲು ಕೋರುವ ಪ್ರಸ್ತಾವನೆಗಳಿಗೆ ಕೆಬಿಒಸಿಡಬ್ಲ್ಯೂಡಬ್ಲ್ಯೂಬಿ ಮಂಡಳಿಯ ವತಿಯಿಂದ ಕೆಟಿಪಿಪಿ ನಿಯಮಾನುಸಾರ ಟೆಂಡರ್ ಕರೆದು ಅರ್ಹ ಸಂಸ್ಥೆಗಳಿಗೆ ಕಾರ್ಯಾದೇಶ ನೀಡಿ ಕಾಮಗಾರಿ ಮುಕ್ತಾಯಗೊಳ್ಳುವವರೆಗೂ ತಾಂತ್ರಿಕ ಸಲಹೆ ಹಾಗೂ ಅನುಷ್ಠಾನಗೊಳ್ಳುವ ಕಾಮಗಾರಿಗಳಲ್ಲಿ ಮೇಲ್ವಿಚಾರಣೆ ನಡೆಸಿ ಬಿಲ್ ಪರಿಶೀಲಿಸಿದ ನಂತರ ಬಿಲ್ ಪಾವತಿಯನ್ನು ಮಾತ್ರ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಪಾವತಿ ಮಾಡುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.
- ನೋಂದಾಯಿತ ಕಾರ್ಮಿಕರ ಮಕ್ಕಳು ಪಿಯುಸಿ ತರಗತಿಯಲ್ಲಿ ಉತ್ತೀರ್ಣರಾಗಿ ಪದವಿ ವ್ಯಾಸಂಗವನ್ನು ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ತಮ್ಮ ಪದವಿ ವ್ಯಾಸಂಗಕ್ಕೆ ಹೊಂದಿಕೊಂಡು ವಾರ್ಷಿಕ 100 ವಿಧ್ಯಾರ್ಥಿಗಳಿಗೆ ಸಂಯೋಜಿತ ಪದವಿ ಕೋರ್ಸ್ (Integrated Degree Course) ಅನ್ನು ಮಂಡಳಿ ವತಿಯಿಂದ ಒದಗಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಹಾಗೂ ಈ ಬಗ್ಗೆ ಮಾರ್ಗಸೂಚಿಗಳನ್ನು ರೂಪಿಸಲು ಮಂಡಳಿಯ ಮಾನ್ಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಅಧಿಕಾರವನ್ನು ನೀಡಲಾಯಿತು.

- ಮಂಡಳಿಯಲ್ಲಿ 4 ಉಪ-ಕಾರ್ಯದರ್ಶಿಗಳ ಹುದ್ದೆಗಳು ಹಾಗೂ 1 ವಿಶೇಷಾಧಿಕಾರಿಗಳ ಹುದ್ದೆಯಿದ್ದು ಮಂಡಳಿಯ ಕೆಲಸದ ಒತ್ತಡವು ಮತ್ತು ಆರ್ಥಿಕ ಉತ್ತರದಾಯಿತ್ವವು ಹೆಚ್ಚಾಗುತ್ತಿರುವುದರಿಂದ ವಿಶೇಷಾಧಿಕಾರಿಗಳ ಹುದ್ದೆಯನ್ನು ಉನ್ನತೀಕರಿಸುವ ಅವಶ್ಯಕತೆ ಕಂಡುಬರುತ್ತದೆ. ಈ ಹಿನ್ನಲೆಯಲ್ಲಿ ವಿಶೇಷಾಧಿಕಾರಿಗಳ ಹುದ್ದೆಯನ್ನು ಜಂಟಿ ಕಾರ್ಮಿಕ ಆಯುಕ್ತರ ಹುದ್ದೆಗೆ ಸಮನಾಂತರವಾಗಿ ಅಪ್‌ಗ್ರೇಡ್ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಈ ಮೇಲಿನ ಚರ್ಚೆಯೊಂದಿಗೆ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು

**(ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್)**
**ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ**
**ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ**
**ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ,**
**ಬೆಂಗಳೂರು**